# ಅಪರಂಜಿ

ಆಗಸ್ಟ್ 1996

ತಿಳಿನಗೆಯ ಕಾರಂಜಿ



* ಪ್ರಕಾಶ್
* ನೀಲೇಶ್ವರ
* ಅರುಣಾ ಕಾರಂತ
* ಬಿ. ಎಸ್. ಪ್ರಭಾಕರ
* ಸುಜಾತ ರಾಜಣ್ಣ
* ಶಿವು
* ಕಂಭಂ ಕೃಷ್ಣಮೂರ್ತಿ
* ನಾ ಕಸ್ತೂರಿ
* ಎಚ್. ಗೋಪಾಲಕೃಷ್ಣ
* ರಾಮು
* ಕು. ಗೋ.
* ಎಂ. ಎಸ್. ಕೆ.
* ನಂದಿನಿ ಕಾಪಡಿ
* ಆನಂದ

ಬಿಡಿ ಪ್ರತಿ : 3 ರೂ. 50 ಪೈ



# ಅಪರಂಜಿ

## (ತಿಳಿನಗೆಯ ಕಾರಂಜಿ)


ಸಂಪುಟ 13 ಆಗಸ್ಟ್ 96 ಸಂಚಿಕೆ- 11

ವಿಸ್ಮಯೋ ಮೇಮಹಾರಾಜ ಹೃಷ್ಯಾಮಿಚ
ಮುಹು ರ್ಮು ಹುಃ -ಗೀತಾ.

ಶ್ರೀಕೃಷ್ಣನ ವಿಶ್ವರೂಪವನ್ನು ನೆನೆಸಿ ನೆನೆಸಿ ನನಗೆ ವಿಸ್ಮಯವೂ, ಹರ್ಷವೂ ಮತ್ತೆ ಮತ್ತೆ ಆಗುತ್ತಿದೆ ಎಂದ ಸಂಜಯ. ಜ್ಞಾನಿಯಾದ ಅವನಿಗಾದಂತೆ ಅಪರಂಜಿಗೂ ಆಗುತ್ತಿದೆ.

ಪೆಟ್ರೋಲಿಯಂ ದರ ಹೆಚ್ಚಳ, ವಿದ್ಯುತ್ ದರ ಹೆಚ್ಚಳ, ಬೆಲೆಗಳ ಹೆಚ್ಚಳ, ದೊಂಬಿಗಳ ಹೆಚ್ಚಳ ಆಗುತ್ತಿದೆ. ಆದರೆ ಅದರದೇನೂ ಮುಖ್ಯವಲ್ಲ.

ಮುಖ್ಯವಾಗಿ ಸೆಕ್ಯುಲರ್ ಫೋರ್ಸಸ್ ಒಟ್ಟುಗೂಡಬೇಕು. ಅದಕ್ಕಾಗಿ ಎಂಥೆಂಥವರಿಗೋ ಎಂಥೆಂಥ ಹುದ್ದೆಯೂ ಸಿಕ್ಕಬೇಕು. ಸಮರ್ಥರಿಗೇ ಏಕೆ ಅವಕಾಶ? ಎಲ್ಲರಿಗೂ ಸಿಕ್ಕಬೇಕು. ಸರಿ. ಕರೆಕ್ಟು. ದೇಶದ ಐವತ್ತನೇ ಸ್ವಾತಂತ್ರ್ಯೋತ್ಸವ ನಿಜಕ್ಕೂ ಮಹಾದ್ಭುತ. ಅಂದಹಾಗೆ ಸವತ್ತಿನ ಸುದ್ದಿ?



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಎಂ. ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)
ದೂರವಾಣಿ: 3345259

# ಈ ಸಂಚಿಕೆಯಲ್ಲಿ

**ಸಂಪುಟ 13** **ಆಗಸ್ಟ್ 96** **ಸಂಚಿಕೆ-11**



ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27




**○ ಪ್ರಕಾಶ್**

ವಿರೋದ ಪಕ್ಷದವರಿಗೂ ಸಂಪುಟದಲ್ಲಿ ಸ್ಥಾನ

- ಬೋರಿಸ್ ಎಲ್ಸಿನ್

**ಭಾರತದ ಗಾಳಿ ಅಲ್ಲಿಗೂ ಬೀಸಿದಂತಿದೆ!!**

★ ★ ★

ಕೆ.ಇ.ಬಿ.ಗೆ ವರ್ಕ್ ಕಲ್ಚರ್ ಇಲ್ಲ - ಸದನದಲ್ಲಿ ಹೇಳಿಕೆ

**'ಕನ್ನಡ' ಭಾಷೆ ಅಂದರೆ ಇದೇ !!**

★ ★ ★

ಗಂಗೂಲಿ ಅವರ ಹೆಸರನ್ನು

ಸೌ-ರನ್ ಅಂತ ಬದಲಾಯಿಸುತ್ತಾರಂತೆ!

★ ★ ★

ರಸಗೊಬ್ಬರ ಹಗರಣ - ಸುದ್ದಿ

**ರಸವತ್ತಾದ ಹಗರಣ !!**

★ ★ ★

ಯುನೈಟೆಡ್ ಫ್ರಂಟ್ ಅಂತ ಏಕೆ ಅಂತಾರೆ?

**ಅಷ್ಟೂ ಗೊತ್ತಿಲ್ಲವೆ? ಬಿಹೈಂಡ್ ದಿ ಸೀನ್ ಮಾರಾಮಾರಿ ಮುಚ್ಚಿಡುಕ್ಕೆ!!**

★ ★ ★

ದೆಹಲಿಯಲ್ಲಿ ಆಡಳಿತ ಭಾಷೆ ಯಾವುದು ಅಂತ ನಿರ್ಧರಿಸಲು ಒಂದು ಆಯೋಗ ನಿಯಮಿಸುತ್ತಾರಂತೆ!!

★ ★ ★

ಕೇಕ್‌ಗಳ ಬದಲು ರಾಗಿಮುದ್ದೆಗಳನ್ನೇ ಬಳಸಬೇಕು ಎಂಬುದು ಶುದ್ಧ ಕುಹಕ!!

★ ★ ★

ನೆರೆ-ಬರ ಪರಿಸ್ಥಿತಿಗೆ ಶಾಶ್ವತ ಪರಿಹಾರ - ಪ್ರಧಾನಿ

ವರುಣನಿಗೇ ಶೋ ಕಾಸ್ ನೋಟೀಸ್ ಕಳಿಸುತ್ತಾರೇನು??


★ ★ ★

ತಸ್ಲೀಮುದ್ದೀನ್ ರಾಜೀನಾಮೆ ''ಬುದ್ಧಿವಂತಿಕೆ ಕ್ರಮ'' - ಲಾಲೂ ಯಾದವ್

ಜಟ್ಟಿ ಬಿದ್ದರೂ ........!!

★ ★ ★

---




''ಥೂ! ಪೋಲಿ! ನಿಮ್ಮಪ್ಪನ ಚಾಳೀನೇ ನಿನಗೂನು...''

# ನೂರು ರೂಪಾಯಿಗೊಂದು ಭೂತ

ನೀಲೇಶ್ವರ

ಸುಬ್ರಹ್ಮಣ್ಯದ ಜಾತ್ರೆ ಸಮಯಕ್ಕೆ ಸರಿಯಾಗಿ, ಸುತ್ತಮುತ್ತ ಊರುಗಳಿಂದ ಎತ್ತಿನ ಗಾಡಿಗಳು ಪಯಣ ಹೊರಡುತ್ತವೆ. ಆಳೊಂದಕ್ಕೆ ಎರಡು ರೂಪಾಯಿ, ಮೂರು ರೂಪಾಯಿ, ಬಾಡಿಗೆ ತೆಗೆದುಕೊಂಡು, ಎರಡು ದಿನದ ಪ್ರಯಾಣಕ್ಕೆ ಒಟ್ಟು ಹತ್ತು ಹನ್ನೆರಡು ರೂಪಾಯಿ ಸಂಪಾದಿಸುವವರು ಗಾಡಿಯವರು. ಅಪರಿಚಿತ ಜನರು, ಮುದುಕರು, ಮೋಟರು, ಜಾತ್ರೆಯಲ್ಲಿ ಪುಣ್ಯಗಳಿಸುವ ಮೋಹದವರು-ಕಾಸು ಸಂಪಾದಿಸುವ ಆಸೆಯವರು, ಎಲ್ಲರೂ ಗಾಡಿಯೊಳಕ್ಕೆ ಸೇರಿ, ಹರಟೆ ಹೊಡೆಯುತ್ತ, ತೂಕಡಿಸುತ್ತ, ದಾರಿ ನೂಕುವರು. ಕಾಡು ಕತ್ತಲು ಆದ್ದರಿಂದ, ಒಳಗಿದ್ದ ಜನ ತಮತಮಗೆ ಹೇಳಿಕೊಳ್ಳುವ ಕಥೆಗಳೆಲ್ಲವೂ ಕಳ್ಳಕಾಕರದೇ; ಭೂತಪ್ರೇತಗಳದೇ. ಮಂತ್ರ, ಮಾಟ, ಪಿಶಾಚಿ, ಮೋಹಿನಿ- ಇವೇ ಅವರನ್ನು ಎವೆ ಇಕ್ಕದೆ ಎಚ್ಚರವಾಗಿ ಕೂರಿಸುತ್ತಿದ್ದದ್ದು. ಕಳೆದ ವರ್ಷ, ಇಂಥ ಒಂದು ಗುಂಪಿಗೆ ನಾನೂ ಗಂಟುಬಿದ್ದೆ. ಭೂತದ ಕಥೆ ಕೇಳಿ ಕೇಳಿ, ನನ್ನ ಮೈ ಬೆವೆತುಹೋಗಿತ್ತು.

ನನ್ನ ಗಾಡಿಯಲ್ಲಿ ಸೇರಿಕೊಂಡಿದ್ದ ಒಬ್ಬ ಇನ್‌ಷೂರನ್ಸ್ ಏಜಂಟ್ ಮಾತ್ರ ಉದ್ದಕ್ಕೂ ತಲೆ ಅಲ್ಲಾಡಿಸುತ್ತಲೇ ಇದ್ದ. ಖದ್ದರ್ ಜುಬ್ಬ, ನೆಹರು ಅರ್ಧಂಗಿ, ಹಿಂದಕ್ಕೆ ಬಾಚಿದ ಇಳಿಕೂದಲು- ಉಡುಪಿ ಕಡೆಯವ. ಕಾಸರಗೋಡು, ಕುಂದಾಪುರ, ಉಪ್ಪಿನಂಗಡಿ, ಮೂಡಬಿದರೆ, ಮುಂಜೇಶ್ವರ ಮುಂತಾದ ಕಡೆಗಳಲ್ಲಿ ನಡೆದಿದ್ದ ನಿಜವಾದ ಭೂತ ಚೇಷ್ಟೆಗಲನ್ನು ನಾವೆಲ್ಲ ಆತನ ಕಿವಿಯೊಳಕ್ಕೆ ತುಂಬಿದೆವು. ಆದರೂ, ಆತ, ''ಸುಳ್ಳು! ಶುದ್ಧ ಸುಳ್ಳು! ನಿಮಗೆಲ್ಲ ಭ್ರಾಂತು'' ಎಂದು ಮೂಗೆತ್ತಿದ.

ಗಾಡಿಯ ತುದಿಯಲ್ಲಿ ತುಟಿ ಕಚ್ಚಿಕೊಂಡು ತೂಗಾಡುತ್ತಿದ್ದ ಇಳಿ ವಯಸ್ಸಿನವರೊಬ್ಬರಿಗೆ ಆತನ ಮೇಲೆ ವಿಪರೀತ ಕೋಪ. ಒಂದೆರಡು ಸಲ ಅವರು ಆತನ ಕಡೆ ತಿರುಗಿ, ''ಸುಳ್ಳು ಅಂತ ಅಷ್ಟು ಜೋರಾಗಿ ಹೇಳಬೇಡಯ್ಯ! ತಿಳಿಯದು, ಅನ್ನು, ಸಾಕು'' ಎಂದು ಗದರಿಸಿದರು. ಆ ಮಾತಿಗೆ ತಗ್ಗದೆ, ಯುವಕ ಮತ್ತೂ ಭೂತಗಳನ್ನು ಅಲ್ಲಗಳೆದಾಗ, ಯಾರೋ ಹೇಳಿದ ಕಥೆಗೆ ವಿಕಟವಾಗಿ ನಕ್ಕಾಗ, ಅವರ ತಾಳ್ಮೆ ನಂದಿತು. ''ಅಯ್ಯ! ನೀನು ಶುದ್ಧ ಹೇಡಿ. ಅದಕ್ಕೋಸ್ಕರವೇ, ಹೀಗೆ, ಭೂತ ಪ್ರೇತ ಎಲ್ಲ ಸುಳ್ಳು ಎಂದು ಸಾಧಿಸಿ ಮಾತನಾಡುತ್ತೀಯ'' ಎಂದರು. ಸ್ವಾರಸ್ಯವಾದ ಜಗಳ ಒಂದು ಪ್ರಾರಂಭವಾಗುತ್ತದೆ ಎಂಬ ಕುತೂಹಲದಿಂದ, ನಾವು ಉಡುಪಿ ತರುಣನ ಹತ್ತಿರಕ್ಕೆ ಸರಿದೆವು. ಒಬ್ಬಿಬ್ಬರು ತಮ್ಮ ಆಕಳಿಕೆಗಳನ್ನು ಅರ್ಧದಲ್ಲೇ ನುಂಗಿದರು.

''ಏ! ಯಾರನ್ನ ರೀ ನೀವು, ಹೇಡಿ, ಅನ್ನೋದು! ನನ್ನನ್ನೇನು? ಎಲ್ಲಿ ಮತ್ತೊಂದು ಸಲ ಅನ್ನಿ, ನೋಡೋಣ'', ಅಂದ ಆತ.

ಅವರು ಗಾಡಿಯ ಅಂಚಿನಿಂದಲೇ ಕೈನೀಡಿ ಆತನ ಕೈಯನ್ನು ಬಲವಾಗಿ ಹಿಡಿದು, ಅಮುಕುತ್ತಾ, ''ಲೋ! ಪುಟ್ಟಕೂಸು! ನಿನ್ನನ್ನೇ ನಾನಂದದ್ದು, ಹೇಡಿ, ಅಂತ! ಭೂತದ ಬಾಲದ ತುದಿ ಕಂಡರೆ, ನೀನು ಹೆದರಿ, ಸತ್ತು, ಸಪ್ತಸಮುದ್ರದಾಚೆ ಬೀಳುತ್ತೀಯ...ನಿನ್ನ ಮಾತು ಕೇಳಿದರೇನೆ, ನನಗೆ ಅಷ್ಟು ತಿಳಿಯುವುದಿಲ್ಲವೆ?...ಪ್ರೇತ, ಪಿಶಾಚಿ ಎಲ್ಲ ಸುಳ್ಳಂತೆ, ಸುಳ್ಳು! ಮಹಾ ಕಂಡಿದಾನೆ, ಇವನು! ಇಂಗ್ಲಿಷ್ ಕಲಿತ ಶಿಂಗ್ಲೀಕ!'' ಅಂದರು.

''ನಿಮ್ಮ ಮುಷ್ಟಿ ಬಲವಾಗಿದೆ, ಒಪ್ಪಿದೆ. ಆದರೆ, ನಿಮ್ಮ ಬುದ್ಧಿ ಯಾಕೊ, ಕೊಂಚ ಸಡಿಲವಾಗಿ ಬಿಟ್ಟಿದೆ, ಸ್ವಾಮಿ'' ಎಂದ, ಯುವಕ ಕೈಬಿಡಿಸಲು ಯತ್ನಿಸುತ್ತ.

ನಮಗೆಲ್ಲ ಒಳನಗು! ಘಾಟಿ ಮುದುಕ, ಚೆನ್ನಾಗಿ ತಿನ್ನಿಸಿದ, ಚೆಳ್ಳೆಕಾಯಿ, ಜಂಬದ ಕೋಳಿಗೆ, ಎಂದು ನಾವು ಹಿಗ್ಗಿದೆವು.

ಆಗ ಅವರು, ''ನಂಬಿಕೆ ಇಲ್ಲವೋ, ನಿನಗೆ? ಈಗ ಹೋಗಿ ಸೇರುತ್ತೇವಲ್ಲ ಛತ್ರ: ಅಲ್ಲಿ ಇಳಿದ ಕೂಡಲೇ, ನಾನು ನಿನಗೆ ಒಂದು ಭೂತವನ್ನ ಮೂಡಿಸಿ ತೋರಿಸಿದರೆ, ಆಗ ನಂಬುತ್ತೀಯಾ?... ನೀನು ಕೇಳಿದ ಭೂತಾನ ತರಿಸುತ್ತೇನೆ, ಅಂತರಿಕ್ಷದಿಂದ..... ಇನ್ನೇನು? ಸುಳ್ಳಂತೆ, ಸುಳ್ಳು! ಹಾಗಾದರೆ, ಮಾಂತ್ರಿಕರು ಮಲೆಯಾಳದವರು, ಎಲ್ಲರೂ ಕಳ್ಳರೇನು? ಎಲ್ಲರೂ ಮುಟ್ಠಾಳರೇನು?'' ಎಂದರು. ಉಡುಪಿಯವನು ತಬ್ಬಿಬ್ಬಾದ. '' ಆಗಬಹುದೋ, ಹೇಳು!'' ಎಂದು ಅವರು ತಿವಿದರು. ನಾವೆಲ್ಲ ಯುವಕನಿಗೆ ಉತ್ಸಾಹ ಬರುವ ಮಾತುಗಳನ್ನಾಡಿದೆವು. ''ಆಗಬಹುದು, ಅನ್ನಿ! ಸ್ವಾಮಿ! ಅದಕ್ಕೇನು?'' ಎಂದೆವು. ''ನೀನು ಕೇಳಿದವರ ಪ್ರೇತ! ಕತ್ತಲಲ್ಲಿ ನಿನ್ನ ಮುಂದೆ ಬರುತ್ತೆ!.... ಆಗ, ನೀನು ಅಯ್ಯೋ ಅಂತ ಕಿರಿಚಿಕೊಂಡು ಕೆಳಗೆ ಬೀಳದೆ ಹೋದರೆ, ನಿನಗೆ ನಾನು ನೂರು ರೂಪಾಯಿ ಕೊಡುತ್ತೇನೆ. ನೀನು ಧೈರ್ಯವಾಗಿ 'ಸುಳ್ಳು' ಅಂತ ಅಲ್ಲಗಳೆದರೆ, ನಿನಗೆ ನೂರು ರೂಪಾಯಿ'' ಎಂದರು. ''ನೂರು ರೂಪಾಯಿ!'' ಎಂದ ಆತ. ''ಬೇಡದೆ ಇದ್ದರೆ ಬಿಡು'' ಎಂದರು ಅವರು. ''ನನ್ನ ಹತ್ತಿರ ಅಷ್ಟು ಹಣವಿಲ್ಲ, ಸ್ವಾಮಿ!'' ಎಂದ ಆತ. ''ಸುತ್ತ ನೋಡಿದ. ಅದಕ್ಕವರು, ''ಅಂಥ ಬಡಪಾಯಿಯಾದಮೇಲೆ, ಬಾಯಿಮುಚ್ಚಿಕೊಂಡು, ಬಾಕಿಯವರ ಮಾತಿಗೆ ಅಸ್ತು ಅಂತ ಹೇಳುತ್ತ ಸುಮ್ಮನೆ ಕೂಡು, ಗಾಡೀಲಿ'' ಎಂದು ಗೊಣಗುತ್ತ ಅವರು ತಾವು ಹೊರಕ್ಕೆ ತೆಗೆದ ಚೀಲವನ್ನು ಮತ್ತೆ ಸೊಂಟಕ್ಕೆ ಸಿಕ್ಕಿಸಿದರು. ''ನನ್ನ ಹತ್ತಿರ ಹತ್ತು ರೂಪಾಯಿಯಿದೆ, ಅಷ್ಟೆ!'' ಎಂದು ಉಡುಪಿಯವನು ಪಿಸುಗುಟ್ಟಿದ. ''ಥತ್! ಹತ್ತು ರೂಪಾಯಿಗೋಸ್ಕರ ನಾನು ಪಿತೃಲೋಕದಲ್ಲಿ ಆರಾಮವಾಗಿರುವವರನ್ನ ಪೀಡಿಸಿ ಭೂಲೋಕಕ್ಕೆ ಎಳೆದುಕೊಂಡು ಬಂದು ನಿನ್ನ ಅವಲಕ್ಷಣದ ಮುಖ ತೋರಿಸಲೆ! ಅದಾಗದು'' ಎಂದು ಅವರು ನಕ್ಕರು. ಗಾಡಿ ಆಚೆ

ಉಗುಳಿದರು. ''ಕೊಟ್ಟರೆ, ನೂರು! ಇಲ್ಲದಿದ್ದರೆ, ಭೂತ ಬರುವ ಹಾಗಿಲ್ಲ'' ಅಂದರು.

ಛೆ! ಒಳ್ಳೆಯದೊಂದು ಅವಕಾಶ ಹೋಯಿತಲ್ಲಾ!, ಎಂದು, ನಾವೆಲ್ಲ ನಿರಾಶರಾದೆವು. ನನ್ನ ಎದುರಿಗಿದ್ದವರೊಬ್ಬರು, ''ನಾನು ಐದು ರೂಪಾಯಿ ಕೊಡುತ್ತೇನೆ, ಸ್ವಾಮಿ'' ಎಂದು ಕೈನೀಡಿದರು. ಉಳಿದವರೂ ಕೂಡ, ಮುದುಕನ ಮಾಟಗಾರತನವನ್ನು ಪರೀಕ್ಷಿಸಿಯೇ ಬಿಡೋಣವೆಂಬ ಹುಮ್ಮಸ್ಸು ಹತ್ತಿತು. ಏಳೆಂಟು ಯಾತ್ರಿಕರು ಗಂಟು ಬಿಚ್ಚಿದರು. ನಾನೂ ಹನ್ನೊಂದೆಣಿಸಿದೆ. ಒಟ್ಟು ನೂರಾಯಿತು ಎಣಿಸಿ, ಜೋಡಿಸಿ, ಉಡುಪಿ ಯುವಕ ತನ್ನ ಪರ್ಸಿನೊಳಗಿಸಿರಿ, ''ನಾನು ಮೂರ್ಛೆ ಬಿದ್ದರೆ, ನೀವೇ ಇದನ್ನ ತೆಗೆದುಕೊಳ್ಳಿ....ಜುಬ್ಬದ ಕಿಸೆಯೊಳಗಿದೆ, ನೋಡಿಕೊಳ್ಳಿ,'' ಎಂದು ಗೆಲವಿನ ನಗೆ ಬೀರಿದ. ''ಎದೆಕೊಟ್ಟು ನಿಲ್ಲುತ್ತೀಯೋ, ನೋಡುತ್ತೇನೆ! ಛತ್ರ ಬಂತಲ್ಲ, ಇನ್ನೇನು! ನನ್ನ ಹತ್ರ ಇರುವ ನೂರರ ನೋಟನ್ನೂ ನೋಡಿಕೊಳ್ಳಿ'' ಎಂದು, ಅವರು, ನಮ್ಮೆದುರು ನೋಟನ್ನು ಬೀಸಿದರು. ಛತ್ರವೂ ಬಂತು. ತುಂಬು ಕುತೂಹಲದಿಂದ ನಾವೆಲ್ಲ ಕೆಳಕ್ಕೆ ದುಮುಕಿದೆವು.

ಪಾರುಪತ್ಯಗಾರ ನಮಗಾಗಿ ಒಂದು ಕೋಣೆಯನ್ನು ಬಿಡಿಸಿಕೊಡುವ ತನಕ ಕೂಡ ನಮ್ಮೆಲ್ಲರಿಗೂ ಸಹನೆ ಸಾಲದು. ಸಿಕ್ಕಿದ ತಕ್ಷಣವೇ, ಅದರೊಳಗೆ ಕಗ್ಗತ್ತಲೆಯಲ್ಲೇ ಜುಬ್ಬದ ತರುಣನನ್ನು ಕೂಡಿಹಾಕಿ ಬಾಗಿಲು ಹಾಕಿದೆವು. ಮುದುಕರು ರಸ್ತೆಯಿಂದ ಒಂದು ಹಿಡಿ ಮಣ್ಣುತಂದು ಮಂತ್ರಿಸಿ ಅದನ್ನು ಆ ಬಾಗಿಲಮೇಲೆ ಬಲವಾಗಿ ಎರಚಿದರು. ಹ್ರೋಂ, ಹ್ರಾಂ, ಹ್ರೀಂ, ಸಕಲ ಭೂತ ಪ್ರೇತನಾಥಾಯ ಪರಿವಾರ ಪರಮೇಶ್ವರಾಯ ವಷಟ್ ಎಂದು ಕೂಗಿದರು. ನಾವೆಲ್ಲ ಸ್ತಂಭೀಭೂತರಾಗಿ ಅಂತರಿಕ್ಷವನ್ನೇ ನಿರೀಕ್ಷಿಸುತ್ತ ನಿಂತಿದ್ದೆವು, ಅಲ್ಲಿದ್ದ ಒಂದು ಮಾವಿನ ಮರದ ಬುಡದಲ್ಲಿ. ''ಏನ್ರೀ ಭೂತ ಚಕ್ಕರ್!....ಶುದ್ಧಮೋಸ...ಅನ್ಯಾಯವಾಗಿ ನೂರುರೂಪಾಯಿ ತೆತ್ತರಲ್ಲಾ'' ಎಂದು, ಉಡುಪಿ ಯುವಕ ಒಳಗಿಂದ ಗಹಗಹಿಸಿದ. ಆಗ, ಅವರು. ಮತ್ತೊಂದು ಸಾರಿ ಮಣ್ಣೆರಚಿದರು. ಮತ್ಸ್ಯ ಕೂರ್ಮ ವರಾಹಾದಿ ಮುದ್ರಿಕೆಗಳನ್ನು ತೋರಿಸಿ, ವಷಟ್ಕಾರ ಮಾಡಿದರು.'' ಈಗ? ಎಂದರು.

''ಈ ಕೋಣೆ ಮೂಲೆಯಲ್ಲಿ ಬಿಳಿ ಹೊಗೆಯಂತೆ ಏನೋ ಕಾಣುತ್ತಿದೆ.... ಹೊರಗಿಂದ ಹೊಗೆ ಬಿಡುತ್ತಿದೀರೋ'' ಎಂದ, ಯುವಕ. ''ಅದು, ಹತ್ರ ಬರುತ್ತಿದೆಯೇ?'' ಎಂದು ಹೊರಗಿನಿಂದಲೇ ಮುದುಕರು ಕೇಳಿದರು. ನಾವು, ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡೆವು. ನಾನು ಹಿಡಿದ ಕೈಕಪ್ಪೆಯಂತೆ ತಣ್ಣಗಿತ್ತು.

''ಹುಂ! ನನ್ನ ಹತ್ರಕ್ಕೆ ಸರಿಯುತ್ತಿದೆ....ಮನುಷ್ಯಾಕಾರ...ಕೈ...ಕಾಲು....ಕೈ ಬೀಸುತ್ತಿದೆ...'' ಎಂಬ ಕೂಗು ಕೇಳಿ ಬಂತು.

''ಯಾರನ್ನು ನೋಡಬೇಕು, ನೀನು, ಈಗ?'' ಎಂದು ಮತ್ರಗಾರ ಪ್ರಶ್ನಿಸಿದ.


''ನನ್ನ ದೊಡ್ಡಪ್ಪ....ನಾರಾಯಣಾಚಾರ್ರು!'' ಎಂಬ ಉತ್ತರ ಬಂತು. ಯುವಕ ನಿಜವಾಗಿಯೂ ಧೈರ್ಯಸ್ಥ- ಎಂದು ನನ್ನ ಕಿವಿಯಲ್ಲಿ ಒಬ್ಬರು ಕೇಳಿದರು. ಅವರ ಗಂಟಲು ಗಡಗಡನೆ ನಡುಗಿತು. ನಾನು ಅವರ ಭುಜದ ಮೇಲೆ ಕೈಯಿಟ್ಟು ಅವರನ್ನು ಹತ್ತಿರಕ್ಕೆಳೆದುಕೊಂಡೆ. ''ಹ...ಹ..ಹ..ವು...ವು...ವು...ದು......'' ಎಂದೆ.

''ಅಕೊ! ನೋಡು! ನಿನ್ನ ದೊಡ್ಡಪ್ಪ...ನಾರಾಯಣಚಾರ್ರು! ನಮಸ್ಕಾರಮಾಡು...ಮೂಢಾ...ತಪ್ಪಾಯ್ತು, ಅನ್ನು!'' ಎಂದು, ಮುದುಕರು ಕೂಗಿದರು. ನನ್ನ ಎದೆ ಡಬಡಬನೆ ಬಡಿಯಿತು. ಒಳಗಿಂದ, ''ಅಯ್ಯೋ!'' ''ಅಯ್ಯೋ!'' ''ಬಿಡಿ, ಬಿಡಿ'' ಎಂಬ ಆರ್ತಧ್ವನಿ ಬಂದು, ನಮ್ಮನ್ನೆಲ್ಲ ಬಡಿಯಿತು. ನಾನು 'ಅಯ್ಯೋ!' ಎಂದು ಕೂಗಿಬಿಟ್ಟ. ''ದೊಡ್ಡಪ್ಪ ನನ್ನ ಕತ್ತು ಹಿಸುಕುತ್ತಿದ್ದಾನೆ...ಸ್ವಾಮಿ! ಬಿಡಿಸಿ....ಬಿಡಿಸಿ....ಸತ್ತೆ....ಅಯ್ಯೋ! ಸತ್ತೆ!'' - ಎಂದು ಗೋಳಾಡಿದ, ಯುವಕ. ಥೊಪ್ ಎಂದು ಆ ಕೋಣೆಯೊಳಗೆ ಯಾವುದೋ ಬಿತ್ತು....

ಮುದುಕರು ಬಾಗಿಲು ತೆರೆದರು. ಯಾರೋ ಒಬ್ಬರು ದೀಪ ತಂದರು. ನಾವೆಲ್ಲ ಒಳಗೆ ನುಗ್ಗಿದೆವು. ಪಾಪ. ಆತ ಜ್ಞಾನತಪ್ಪಿ ನೆಲದಮೇಲೆ ಬಿದ್ದಿದ್ದ. ಮುಖದಮೇಲೆ ನೀರೆರಚಿದೆವು. ನಿಧಾನವಾಗಿ ಕಣ್ಣರಳಿಸಿ ಎದ್ದು ಕೂತ.... ಕೂತಕೂಡಲೇ, ಆತನಲ್ಲಿ ಭಯಂಕರ ಕೋಪ ಪ್ರಜ್ವಲಿಸಿತು, ಕಣ್ಣು ಕಿಡಿ ಕಾರಿತು...

''ಎಲ್ಲಿ! ಆ ಮಾಟಗಾರ? ಎಲ್ಲಿ ಆ ಮುದುಕ? ಭೂತ ತೋರಿಸುತ್ತೇನೆ ಅಂದವರು, ಅದರ ಕೈಯಿಂದ ನನ್ನ ಕತ್ತು ಕಿವಿಚಿಸಿದ ಕಳ್ಳ!'' ಎಂದು ಆರ್ಭಟಿಸುತ್ತ ಆತ ಆಲ್ಲೆಲ್ಲ ಹುಡುಕಿದ....ಮುದುಕ ಅಲ್ಲಿ ಇರಲಿಲ್ಲ. ''ಎಲ್ಲಿ, ಎಲ್ಲಿ ಅವನು?'' ಎಂದು ಕೂಗುತ್ತ, ಯುವಕ ರಸ್ತೆ ಕಡೆ ಓಡಿದ!

ನಾವು ಅಲ್ಲೇ ಬಹಳ ಹೊತ್ತು ನಿಂತಿದ್ದೆವು....'ಪರವಾ ಇಲ್ಲ! ನಮ್ಮಿಂದ ದೋಚಿದ ಹಣಕ್ಕೆ, ಒಳ್ಳೇ ತಮಾಷೆ ತೋರಿಸಿದರಲ್ಲಾ, ಇಬ್ಬರೂ ಸೇರಿಕೊಂಡು'' ಎಂದು ಸಮಾಧಾನಪಡುತ್ತಾ, ಮಲಗಿದೆವು. ಆದರೂ, ನಿದ್ದೆ ಬರಲಿಲ್ಲ.



''ಈಚೆಗಂತೂ ಇದಿಲ್ದೇ ನಾನು ಆಚೆ ಕಾಲಿಡೋದೇ ಇಲ್ಲ ಕಣೇ''




“ನಿಮ್ಮನ್ಯಾರ್ರೀ ಕೇಳ್ದವರು ಅದನ್ನೆಲ್ಲಾ”

# - ಸಣ್ಣ ಹುಡುಗ -

ಅರುಣಾ, ಆರ್. ಕಾರಂತ.

ಎಂಥಾ ಕಾಲ ಬಂದೈತ್ರವ್ವ
ಅಂತಾ ನಮ್ಮವ್ವ ಹೇಳ್ತಾಳ್ರಿ
ಇಂಥಾದ್ದೆಲ್ಲ ಇದ್ದಿಲ್ಲ್ರವ್ವ ನಮ್ಮ ಕಾಲಕ ಅಂತಾಳ್ರಿ

ಎಂಟಕ್ಕೆದ್ದು ಘಂಟೆ ನೋಡಿ
ಗಂಟು ಮೊರಿ ಹಾಕ್ತಾವ್ರಿ
ಘಂಟೆಗೆ ಇಷ್ಟು ಬುದ್ಧಿ ಇಲ್ಲ,
ಎಂದು ನಮ್ಗ ಕೇಳ್ತಾರ್ರಿ.

ಅಮ್ಮ ಅಂದಂತೆ ಮಕ್ಕಳು ಹೇಳುತ್ತಿದ್ದರು. ಹಿಂಗs ಮಕ್ಕಳ ವಾಕ್ಝರಿ ಹರಿದಿತ್ತು. ಇನ್ನs ಚಾ ಯಾಕ ಬಂದಿಲ್ಲ? ನನ್ನ ಕಣ್ಣು ಅಡಗೀಮನಿ ಕಡಿನs ಹೊರಳಿತ್ತು. 'ಸಕ್ಕರೆ ನೀ ಸಿಕ್ಕರೆ, ಅದೇನು ಅಕ್ಕರೆ'

ವಾಗ್ಬಾಣ ಸಿಡಿಯಿತು. ಇನ್ನು ಅಲ್ಲೆ ಇದ್ರ ಚೊಲೋ ಅಲ್ಲ ಅಂತ ಏಳೂದಕ್ಕೂ ಒಂದು ಫುಟಾಣಿ ಸ್ವರವೆತ್ತಿತು. 'ಅಪ್ಪಾ, ಮಾಸ್ತರ ಬಾs ಅಂದಾರs 'ಯಾಕಂತs' ಉತ್ತರವಾಗಿ ಆನ್ಸರ್ ಶೀಟ್' (Answer sheets) ನನ್ನೆದುರಿಗೆ ಹಿಡಿದನು ಕುಮಾರ ಕಂಠೀರವ ಒಂದು ಪೇಪರಿನಲ್ಲಿ, ಪ್ರಶ್ನೆ:- ವಾಟ್ ಈಸ್ ಯುವರ್ ನೇಮ್? ಉತ್ತರ:- ಮೈ ನೇಮ್ ಈಜ ಶ್ರೀಪಾದ, ಹಿಡಿ ನನ್ನ ಪಾದ ತಗೋ ನನ್ನ ಆಶೀರ್ವಾದ. ಪ್ರಶ್ನೆ:- ವಾಟ್ ಈಜ ಎ ಸೆಂಟೆನ್ಸ್ ಉತ್ತರ:- ಎ ಸೆಂಟೆನ್ಸ್ ಈಜ ಎ ಶುಂಠಿಪುಡಿ, ನೆಗಡಿ ಬಂದ್ರ ಹಾಕ್ಕೊಂಡ್ಕುಡಿ, ಒಂದೆರಡು ಉತ್ತರ ಓದೋದ್ರಾಗs ಸಿಟ್ಟು ಬಂದ್ರ ಹ್ಯಾಂಗs? ಮತ್ತೊಂದು ಪೇಪರಿನಲ್ಲಿ, ಒಂದು ಪ್ರಶ್ನೆಗೆ ಹೀಗಿತ್ತು ಉತ್ತರ:- 'ವ್ಯಾಕರ್ಣ ಅಂದ್ರೆ ಗೋಕರ್ಣ,' ನನ್ನ ಪೇಶನ್ಸ್ ಹಾರಿತ್ತು ಗಾಳಿಗೆ! 'ಇಲ್ಲೇ ಬಿದ್ದಿರು, ಕುಂಭಕರ್ಣ ಎಂದು ಶಾಲೆಗೆ ತತ್‌ಕ್ಷಣ ಹೋದೆ.

ಶಾಲೆ ಥೇಟ್ ದೊಡ್ಡಿ ಇದ್ದ್ಹಾಂಗs ಇತ್ತು. 'ಶಾಲೆಗ್ಹೋದ್ರೆ ಡೈವ್ ಹೊಡಿ' ಮಗಳೆಂದುದು ನೆನಪಾಯಿತು ಪಡಸಾಲೆಯಿಂದ ಕ್ಲಾಸಿಗೆ ಡೈವ್ ಹೊಡಿಯೂಹಂಗs ಇತ್ತು. ಪಡಸಾಲೆಗೂ ಕ್ಲಾಸಿಗೂ ನಡುವೆ ನಳದ ನೀರಿನ ಕಾಲುವೆಯಿತ್ತು. ಅದನ್ನಿನ್ನೂ ಮುಚ್ಚಿರಲಿಲ್ಲ, ಎಂಥಾ ಅವಸರ ಗ್ರಾಮಪಂಚಾಯ್ತಿಗೆ ಅಲ್ಲs!

'ಬರ್ರೀ, ಕುಂದರ್ರೀ' ಹೆಡ್ಮಾಸ್ತರರು ಒಂದು ಕುರ್ಚಿಯನ್ನು ತೋರಿಸಿದರು. ಇಬ್ಬರು ಹುಡುಗರು ಒಂಟಿಕಾಲಿನ ಶಿಕ್ಷೆಯಲ್ಲಿ ನಿಂತಂತಿತ್ತು ಆ ಕುರ್ಚಿ. ಮತ್ತs ಬರಾಕ ಹೇಳಿದ್ರಂತs ಅಂದೆ 'ಹೌಂದ್ರೀs,' (ಹೌದ್ರಿ), 'ಪೇಪರ್ ನೋಡಿದ್ರಿ' ಕೇಳಿದ್ರು ಹರಾಂ ಸಣ್ಣ ಹುಡುಗ 'ಹೆಚ್ಚು-ಕಮ್ಮಿ ಆಗೂದs, ಸಂಭಾಳಿಸ್ಕೋ ಬೇಕ್ರಿs ನಾನೂ ತುಸು ಜರ್ಬಿನಿಂದಲೇ ಒದರಿದೆ 'ಅವರಲ್ದs ನಾವ್ ಹಾಂಗ ಬರದ್ರ ಛಂದ ಕಾಣಸ್ತದs?' ಹೆಡ್ಮಾಸ್ತರ್‌ರು ಗಪ್‌ಚುಪ್ ಮೂಗಿನ ಮ್ಯಾಲ ಬೆರಳಿಟ್ಕೊಂಡು ಕೂತ್ಕೊಂಡ್ರು 'ಎಷ್ಟ ಬಡ್ಕೊಂಡ್ರೂ ಅಷ್ಟs' ಅಂತ ಗಟ್ಟಿಯಾಗಿ ಸ್ವಗತ ಹೇಳಿ ಮನೆಯ ಕಡೆಗೆ ತಿರುಗಿದೆ.

# ವರ್ಗೀಕೃತ ಜಾಹೀರಾತು

**ಬಿ.ಎಸ್. ಪ್ರಭಾಕರ್**

## ★ಕರಡಿ★ ಮಾರ್ಕಿನ ಹೇರ್ ಆಯಿಲ್

ಕೂದಲು ಉದುರುತ್ತಿದೆಯೇ? ಕೂದಲು ನರೆತು ಹೋಗುತ್ತಿದೆಯೇ? ತಲೆಯಲ್ಲಿ ಹೊಟ್ಟು ತುಂಬಿದೆಯೇ?

ಈ ಎಲ್ಲ ಅನಿಷ್ಟಗಳ ಬಗೆಗೆ ಇನ್ನು ನೀವು ತಲೆ ಕೆರೆದುಕೊಂಡು, ಮತ್ತಷ್ಟು ಕೂದಲು ಉದುರುವಂತೆ ಮಾಡಿಕೊಳ್ಳಬೇಡಿ.

ನಿಮ್ಮೆಲ್ಲ ಕೇಶ ಸಮಸ್ಯೆಗಳಿಗೆ, ಕೇವಲ ಒಂದೇ ಒಂದು ದಿವ್ಯ ಔಷಧಿಯಿಂದ ಸೂಕ್ತ ಪರಿಹಾರ ಈಗ ಸುಲಭ ಸಾಧ್ಯ.

ಆ ದಿವ್ಯ ಔಷಧಿಯೇ ನಿಮ್ಮ ನೆಚ್ಚಿನ ★ಕರಡಿ★ ಮಾರ್ಕಿನ ಹೇರ್ ಆಯಿಲ್ ಈಗಾಗಲೇ ಕಣ್ಮರೆಯಾಗಿರುವ ಅನೇಕ ಗಿಡ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಿರುವ, ನಿಮ್ಮ ನೆಚ್ಚಿನ ★ಕರಡಿ★ ಮಾರ್ಕಿನ ಹೇರ್ ಆಯಿಲ್ ಈಗಾಗಲೇ ಆಫ್ರಿಕಾ ದೇಶಗಳಲ್ಲಿ ಅತ್ಯಂತ ಜನಪ್ರಿಯವಾಗಿ, ಇದೀಗ ನಿಮ್ಮ ಪುಣ್ಯಭೂಮಿಯಾದ ಭಾರತಕ್ಕೂ ಪಾದಾರ್ಪಣೆ ಮಾಡಿದೆ.

★ಕರಡಿ★ ಮಾರ್ಕಿನ ಹೇರ್ ಆಯಿಲ್ ಅನ್ನು ಮತ್ತಷ್ಟು ಜನಪ್ರಿಯಗೊಳಿಸುವ ಸಲುವಾಗಿ ಪ್ರತಿ 200 ಮಿ.ಲೀ ಬಾಟಲಿನ ಜೊತೆಗೆ ಒಂದು ಆಕರ್ಷಕ ಟೋಪನ್ ಉಚಿತ.

ಈ ಕೊಡುಗೆ ಕೇವಲ ಒಂದು ವಾರ ಮಾತ್ರ.

ಎಚ್ಚರಿಕೆ: ನಕಲಿ ಮಾಲುಗಳಿಂದ ಮೋಸಹೋಗಬೇಡಿ. ಬಾಟಲಿನ ಮೇಲೆ ★ಕರಡಿ★ ಮಾರ್ಕ್ ಇರುವುದನ್ನು ಮತ್ತು ಹೇರ್ ಆಯಿಲ್ ಮೇಲೆ ಸಮೃದ್ಧವಾಗಿ ನವುರಾದ ಬಿಳೀ ಕೂದಲು ಬೆಳೆದಿರುವುದು, ಖಚಿತಪಡಿಸಿಕೊಳ್ಳಬೇಕಾಗಿ ಸಾರ್ವಜನಿಕರನ್ನು ಪುಸಲಾಯಿಸಿದೆ.

ಕೆಲವು ಗಂದಿಗೆ ಅಂಗಡಿಗಳಲ್ಲಿ ದೊರಕುತ್ತದೆ.

## ದಗೆ ಬ್ರಾಂಡಿನ ಫ್ಯಾನ್

ಕಂಪ್ಯೂಟರ್ ಸಹಾಯದಿಂದ ವಿನ್ಯಾಸಗೊಳಿಸಲ್ಪಟ್ಟಿರುವ ದಗೆ ಫ್ಯಾನನ್ನು ಕೊಂಡು, ನೂರಕ್ಕೆ ನೂರರಷ್ಟು ವಿದ್ಯುತ್ ಉಳಿಸಿರಿ.

ಚಲಿಸುವಾಗ ಇಂಪಾದ ಸಂಗೀತ ನೀಡಬಲ್ಲ ನಮ್ಮ ಫ್ಯಾನ್ ಬೇರೆಲ್ಲಾ ಫ್ಯಾನ್‌ಗಳಿಗಿಂತ ಅತೀ ಹೆಚ್ಚಿನ ತಂಗಾಳಿಯನ್ನು ಚಳಿಗಾಲದಲ್ಲಿ ನೀಡುತ್ತದೆ.

ನಾಲ್ಕು ವರ್ಣಗಳಲ್ಲಿ ಲಭ್ಯವಿರುವ ದಗೆ ಫ್ಯಾನ್ ಹತ್ತು ವರ್ಷ ಗ್ಯಾರಂಟಿಯನ್ನೂ

ಹೊಂದಿದೆ.

ದಗೆ ಫ್ಯಾನ್ ಕೊಳ್ಳುವವರಿಗೆ ಒಂದು ಡಜನ್ ಆಕರ್ಷಕ ಬಿದಿರಿನ ಬೀಸಣಿಗೆಗಳನ್ನು ಉಚಿತವಾಗಿ ನೀಡಲಾಗುವುದು.

ಈ ಕೊಡುಗೆ ನಮ್ಮ ಸಂಸ್ಥೆ ಇರುವ ತನಕ ಮಾತ್ರ. ಹತ್ತಿರದ ಸ್ಕ್ರ್ಯಾಪ್ ಮಾರಾಟಗಾರರಲ್ಲಿ ಇಂದೇ ವಿಚಾರಿಸಿ.

## ★ ನವೆ ಮೈ ಸಾಬೂನು ★

ನಿಮಗೂ, ನಿಮ್ಮ ಸೌಂದರ್ಯವನ್ನು ವಿಶ್ವಸುಂದರಿಯರ ಮಟ್ಟಕ್ಕೆ ಏರಿಸಿಕೊಳ್ಳಬೇಕೆಂಬ ಹೆಬ್ಬಯಕೆ ಇದೆಯೆ? ಹಾಗಾದರೆ ಇಂದಿನಿಂದಲೇ ನಮ್ಮ ನವೆ ಮೈ ಸಾಬೂನನ್ನು ಧಾರಾಳವಾಗಿ ಬಳಸಿರಿ. ಇದಕ್ಕೆ ಸರಿಸಾಟಿಯಾದ ಮೈ ಸಾಬೂನು ಇನ್ನೊಂದಿಲ್ಲ.

ನಿಮ್ಮ ಪುಣ್ಯಭೂಮಿಯಾದ ಭಾರತದಲ್ಲಿ ತಯಾರಾಗುತ್ತಿರುವ ಅನೇಕಾನೇಕ ಮೈ ಸಾಬೂನುಗಳಲ್ಲಿ ಒಂದೊಂದರಲ್ಲೂ ಒಂದೊಂದು ವೈಶಿಷ್ಟ್ಯ ಗುಣ ಇರುತ್ತದೆ. ಆದರೆ ಜನ ಸಾಮಾನ್ಯರು ಎಲ್ಲಾ ಬಗೆಯ ಸಾಬೂನುಗಳನ್ನು ಕೊಂಡು ಉಪಯೋಗಿಸುವುದು ಸುಲಭ ಸಾಧ್ಯವಲ್ಲ.

ಆದರೆ ಇದಕ್ಕಾಗಿ ನೀವಿನ್ನು ಚಿಂತಿಸುವ ಅಗತ್ಯವಿಲ್ಲ. ನಮ್ಮ ಹಲವಾರು ವರ್ಷಗಳ ಸತತ ಸಂಶೋಧನೆಯ ಫಲವೇ ನಿಮ್ಮ ನೆಚ್ಚಿನ ನವೆ ಸಾಬೂನು.

ಈ ಪುಣ್ಯ ಭೂಮಿಯಲ್ಲಿ ತಯಾರಾಗುವ ಪ್ರತಿಯೊಂದು ಬಗೆಯ ಮೈ ಸಾಬೂನುಗಳನ್ನು ಕೊಂಡು, ಸರಿಯಾದ ಪ್ರಮಾಣದಲ್ಲಿ ಮಿಶ್ರಣ ಮಾಡಿ,* ಆನಂತರ ಚೆನ್ನಾಗಿ ರುಬ್ಬಿ, ಪುನಃ ಬಿಲ್ಲೆಗಳನ್ನಾಗಿ ಮಾಡಿ ನವೆ ಬ್ರ್ಯಾಂಡಿನಲ್ಲಿ ಮಾರಲ್ಪಡುತ್ತಿದೆ.

ಜೀವನದಲ್ಲಿ ಒಮ್ಮೆಯಾದರೂ ನಮ್ಮ ಸಾಬೂನನ್ನು ಉಪಯೋಗಿಸಿ ನವೆ ಸುಖವನ್ನು ಅನುಭವಿಸಿ.

ಆರು ನವೆ ಸಾಬೂನು ಬಿಲ್ಲೆ ಕೊಳ್ಳುವವರಿಗೆ ಇನ್ನೂರೈವತ್ತು ಗ್ರಾಮಿನಷ್ಟು ನವೆ ಶಾಮಕ ಮುಲಾಮನ್ನು ಗ್ರಾಹಕರು ಇಷ್ಟಪಟ್ಟ ದಿನದಲ್ಲಿ, ಅವರ ಮೈಗೆ ಉಚಿತವಾಗಿ ಹಚ್ಚಲಾಗುವುದು.

ಈ ಕೊಡುಗೆ ಗ್ರಾಹಕರು ತಿರುಗಿ ಬೀಳುವ ತನಕ ಮಾತ್ರ. ಇಂದೇ ನವೆ ಸಾಬೂನನ್ನು ಕೊಳ್ಳಲು ಧೈರ್ಯಮಾಡಿ. ಎಲ್ಲಾ ಸಂತೆಗಳಲ್ಲಿ ನವೆ ಸಾಬೂನು ಮಾರಲು ಏರ್ಪಾಡು ಮಾಡಲಾಗಿದೆ.

** ಆಯಾ ತಯಾರೀಕರ ಒಪ್ಪಿಗೆ ಪಡೆಯಲು ಈಗಾಗಲೇ ಮನವೀಪತ್ರಗಳನ್ನು ಗೋಡೆಗಳ ಮೇಲೆ ಅಂಟಿಸಲಾಗಿದೆ.*

# ಜನರೇಷನ್ ಗ್ಯಾಪ್

ಸುಜಾತ ರಾಜಣ್ಣ

ಎಲ್ಲಾ ತಂದೆ ತಾಯಂದಿರ ತರಹ ಕಾಲ ಕೆಟ್ಟೋಯ್ತು, ಮಕ್ಕಳು ಮಾತೇ ಕೇಳೋಲ್ಲ, ಅವರ ನಡೆ ನುಡಿಗಳೋ, ವೇಷ ಭೂಷಣಗಳೋ ಒಂದಕ್ಕಿಂತ ಒಂದು ಘೋರ ಅಂತ ಗೊಣಗಾಡುವುದು ನಮ್ಮ ಅಭ್ಯಾಸ. ನಮ್ಮ ಮಕ್ಕಳು ಈ ಮಾತಿಗೆ ಕಿವುಡನ ಕಿವಿ ತಿರುಗಿಸಿ ಓಡಾಡುವುದು ಇನ್ನೂ ಕೆಟ್ಟದಾಗಿ ಡ್ರೆಸ್ ಮಾಡಿಕೊಳ್ಳುವುದು ಅವರ ಹವ್ಯಾಸ.

ಒಂದು ಸಲ ಹೀಗೆ ಯಾವುದೋ ಮೀಟಿಂಗ್‌ಗೆ ಹೋಗಿದ್ವಿ, ಮೀಟಿಂಗ್ ಆದ ಮೇಲೆ ಫೆಲೋಷಿಪ್. ನಾವು ಒಂದು ಜೋಡಿ ಬೆಂಗಳೂರಿನವರು, ಇನ್ನೊಂದು ಜೋಡಿ ಪೂನಾದವರು, ಇನ್ನೊಂದು ಜೋಡಿ ಡೆಲ್ಲಿಯವರು ಮತ್ತೊಂದು ಜರ್ಮನಿಯ ಹ್ಯಾಂಬರ್ಗ್‌ನ ಜೋಡಿ. ಸರಿ ಉಲ್ಲಾಸದಿಂದ ಮಾತಾಡುತ್ತಾ ಸ್ಕ್ವೇರ್ ಒನ್ ಅಂದರೆ ಮಕ್ಕಳ ವಿಚಾರಕ್ಕೆ ಬಂದ್ವಿ. ಬಿಯರ್ ಕುಡಿದು ಚಿಪ್ಸ್ ತಿಂದು, ಮತ್ತೆ ಕೆಲವುರು ಟೋರಿನೋ ಕುಡಿದು ಕಡಲೆ ಬೀಜ ತಿಂದು ಒಂದು ಸುಸ್ಥಿತಿಗೆ ಬಂದಿದ್ವಿ. ನಂಬಿದರೆ ನಂಬಿ ಬಿಟ್ಟರೆ ಬಿಡಿ ಜಗತ್ತಿನ ಯಾವುದೇ ಮೂಲೆಯ ತಂದೆ ತಾಯಿಗಳಿರಲಿ ಅವರ ಮಕ್ಕಳ ಬಗ್ಗೆ ಕಾಲದ ಬಗ್ಗೆ ಒಂದೇ ತರಹದ ಅಭಿಪ್ರಾಯ ಹೊಂದಿರುತ್ತಾರೆ. ಜಗತ್ತಿನ ಯಾವುದೇ ಮೂಲೆ ಮಕ್ಕಳಿರಲಿ ಒಂದೇ ತರಹ ನಡವಳಿಕೆ ಹೊಂದಿರ್‍ತಾರೆ. ಈ ಅದ್ಭುತ ವಿಚಾರ ನಮ್ಮ ತಲೆಯಲ್ಲಿ ಹೊಳೆದಾಗ ನಮ್ಮೆಲ್ಲರ ಹೃದಯ ತುಂಬಿ ಬಂತು. ಸಂತೋಷ ಉಕ್ಕಿ ಹರಿಯಿತು ಎಲ್ಲರೂ ಹೃದಯ ಹಗುರ ಆಗುವ ಹಾಗೆ ಒಂದೇ ಸಲ ಜೋರಾಗಿ ನಕ್ಕುಬಿಟ್ವಿ.

ಈಗಿನ ಹದಿಹರೆಯದವರಿಗೆ ಜೀನ್ಸ್ ಬಿಟ್ಟರೆ ಬೇರೆ ಯಾವುದೂ ಡ್ರೆಸ್ಸೇ ಅಲ್ಲ ಅನ್ನುವ ಭಾವನೆ. ಸ್ಕೂಲ್‌ಗಳಲ್ಲಿ ಮಕ್ಕಳಲ್ಲಿ ಸಮಾನತಾ ಮನೋಭಾವ ಮೂಡಿಸಲು ಯೂನಿಫಾರಂ ಕಡ್ಡಾಯ ಮಾಡಿರ್‍ತಾರೆ. ಹಾಗೆ ನಮ್ಮ ಕಾಲೇಜ್ ಯೂನಿಫಾರಂ ಈ ಜೀನ್ಸ್. ಈ ಜೀನ್ಸ್ ಎಷ್ಟು ಬಣ್ಣ ಹೋಗಿದ್ದರೆ ಎಷ್ಟು ಕಿತ್ತುಹೋಗಿದ್ದರೆ ಅಷ್ಟು ಆಧುನಿಕ ಅನ್ನುವ ಮನೋಭಾವನೆ ಬೇರೆ. ಈ ಜೀನ್ಸ್ ಎಲ್ಲಿಂದ ಬಂತೋ, ಹೇಗೆ ಬಂತೋ ಅಂತೂ ಎಲ್ಲ ವರ್ಗದ ಹದಿಹರೆಯದವರೂ ಖುಷಿಯಿಂದ ಯಾರೂ ಬಲವಂತ ಮಾಡದೇ ಹಾಕಿಕೊಳ್ಳುವುವು ಅಂದರೆ ಈ ಜೀನ್ಸ್ ನಮಗೂ ಈಗ ಯಾರಾದ್ರೂ ಹದಿಹರೆಯದವರು ನೀಟಾಗಿ ಇಸ್ತ್ರಿಮಾಡಿದ ಒಳ್ಳೆಯ ವುಲ್ಲನ್ ಪ್ಯಾಂಟ್ ಹಾಕಿಕೊಂಡು ತುಂಬುತೋಳಿನ ಶರ್ಟ್ ಹಾಕಿಕೊಂಡು. ತಳ ಥಳ ಅನ್ನುವ ಹಾಗೆ Polish ಮಾಡಿದ ಷೂಸ್ ಹಾಕಿಕೊಂಡಿದ್ದರೆ ಒಂದು ತರಹ ಗಮಾರ್‌ಗಳ ಹಾಗೆ ಕಾಣ್ತಾರೆ ಅಂದರೆ ಈ ಜೀನ್ಸ್‌ನಲ್ಲಿರುವ ಐಕ್ಯತೆಗೆ ತಲೆ ಬಾಗಲೇ ಬೇಕು.

ಮೊನ್ನೆ ಇದ್ದಕ್ಕಿದ್ದ ಹಾಗೆ ನನ್ನ ಹದಿಹರೆಯದ ಮಗ ಮನೆ ಹಾರಿ ಹೋಗುವ ಹಾಗೆ ಕೂಗಾಡ್ತಾ ಇದ್ದ ಏನಾಯ್ತಪ್ಪಾಂತ ನೋಡಿದ್ರೆ ದೊಡ್ಡ ಅನಾಹುತ ಆಗ್ಹೋಗಿರುವ ತರಹ ಮುಖಬೇರೆ ಮಾಡಿಕೊಂಡಿದ್ದ. ಅವನ Polish ಇಲ್ಲದ ಷೂಸ್ ನೋಡಲಾರದೆ ಮತ್ತೆ ಆ ಲೆದರ್‌ಗೆ ಸ್ವಲ್ಪ ಆಯಸ್ಸು ಜಾಸ್ತಿ ಮಾಡೋಣಾಂತ ನನ್ನ ಚಪ್ಪಲಿಗೆ ಪಾಲಿಷ್ ಮಾಡಿಕೊಂಡಾಗ ಅವನ ಷೂಸ್‌ಗೂ ಪಾಲಿಷ್ ಮಾಡಿಟ್ಟಿದ್ದೆ. ಆ ಷೂಸ್ ಕೈಯಲ್ಲಿ ಹಿಡಿದುಕೊಂಡು ಹಾರಾಡ್ತಾ ಇದ್ದ. ದೆವ್ವ ಮೆಟ್ಟಿದವನ ತರಹ ಕಂಗಾಲಾಗಿದ್ದ.

ಏನಾಯ್ತು ಅಂತ ಕೇಳಿದ್ದಕ್ಕೆ ಈ ಷೂಸ್ ಹಾಕಿಕೊಂಡು ಕಾಲೇಜಿಗೆ ಹೇಗೆ ಹೋಗೋದು ಎಲ್ಲರೂ ನಗ್ತಾರೆ ಅಂತ ಉರಿದುಬಿದ್ದ. ಆಮೇಲೆ ಉಪ್ಪು ಕಾಗದ ತಗೊಂಡು ಆ ಷೂಸ್ ಉಜ್ಜಿಕೊಂಡು ಅದರ ಪಾಲಿಷ್ ಎಲ್ಲಾ ತೆಗೆದು ಹಾಕಿಕೊಂಡು ಕಾಲೇಜಿಗೆ ಹೋದ. ಇವನ ಬುದ್ಧಿ ನಿಜವಾಗಲೂ ನೆಟ್ಟಗೆ ಇದೆಯಾ ಅಂತ ತಲೆ ಚಚ್ಚಿಕೊಂಡೆ.


ನಮ್ಮ ಮಕ್ಕಳ ಕಥೆ ಹೀಗಾದ್ರೆ ನಮ್ಮ ಮೊಮ್ಮಕ್ಕಳದು ಇನ್ನೂ ಮಜ ಇರುತ್ತೆ. ನನ್ನ ಮೊಮ್ಮಗ ಮೂರುವರೆ ವರ್ಷದವನು ಮೊನ್ನೆ ರಜಕ್ಕೆ ನಮ್ಮ ಮನೆಗೆ ಬಂದಿದ್ದ. ಸರಿ ರಾಮಯಣ ಮಹಾಭಾರತ ಇದೆಲ್ಲಾ ಅರೆದು ಕುಡಿಸೋಣ ನಮ್ಮ ದೇವರ ಬಗ್ಗೆ ತಿಳಿಸೋಣ ಅಂತ ಅಮರ ಚಿತ್ರಕಥೆ ಪುಸ್ತಕ ಕೆಲವು ಕೊಂಡು ಕೊಂಡು ಬಂದೆ, ರಾಮಾಯಣದಲ್ಲಿ ರಾಮ ಹೇಗೆ ತಂದೆಯ ಮಾತು ಕೇಳಿದ ಅಂತ ಹೇಳಿ ತಂದೆಯ ಮಾತು ನಡೆಸಲು 14 ವರ್ಷ ಕಾಡಿಗೆ ಹೋದ ಅಂತ ಹೇಳಿದೆ. ರಾಮ ತಂದೆಯ ಮಾತು ಕೇಳಬಾರದಾಗಿತ್ತು ಅಂದ. ಸುಮ್ಮನೆ ಅನ್ಯಾಯವಾಗಿ ಕಾಡಿಗೆ ಹೋಗಿ ಸೀತೆನ ಕಳೆದು ಹಾಕುವುದಕ್ಕೆ ಬದಲು ನೀವು ಕೆಟ್ಟ ಡ್ಯಾಡಿ ನಿಮ್ಮ ಮಾತು ಕೇಳಲ್ಲ ಅಂತ ಹೇಳ ಬೇಕಾಗಿತ್ತು ಅಂದ.

ರಾಮಾಯಣ ಸಾಕು ಅಂತ ಗಣೇಶನ ಕಥೆ ಶುರು ಮಾಡಿದೆ ಹೀಗೆ ಶಿವ ಸಿಟ್ಟಿನಿಂದ ಗಣೇಶನ ಕತ್ತು ಕತ್ತರಿಸಿ ಹಾಕಿದ ಆಮೇಲೆ ಪಾರ್ವತೀನ ಸಮಾಧಾನಪಡಿಸುವುದಕ್ಕೋಸ್ಕರ ಉತ್ತರ ದಿಕ್ಕಿನಲ್ಲಿ ಮಲಗಿರುವ ಯಾವುದಾದರೂ ಜೀವಕೋಟಿಯ ತಲೆ ಕತ್ತರಿಸಿ ತಂದು ಗಣೇಶನ ಕತ್ತಿಗೆ ಸೇರಿಸಿ ಅಂತ ತನ್ನ ಕಿಂಕರರಿಗೆ ಹೇಳಿ ಆಮೇಲೆ ಜೀವದಾನ ಮಾಡಿದ ಅಂತ ಹೇಳಿದೆ. ಅಯ್ಯೋ, ಅನ್ಯಾಯವಾಗಿ ಮಗನ ಕತ್ತು ಕತ್ತರಿಸಿದ್ದಲ್ಲದೆ ಆನೆ ಕತ್ತು ಯಾಕೆ ಕತ್ತರಿಸ ಬೇಕಾಗಿತ್ತು ಅಲ್ಲೇ ಬಿದ್ದಿದ್ದ ಗಣೇಶನ ತಲೇನ ತಂದು ಸೇರಿಸುವುದಕ್ಕೆ ಆಗುತ್ತಾ ಇರಲಿಲ್ಲವಾ? ಅಂತ ನನ್ನೇ ಕೇಳಿದ. ಅದೂ ನಿಜ ಶಿವನಿಗೆ ಇದು ಯಾಕೆ ಹೊಳೀಲಿಲ್ಲ ಅಂತ ನಂಗೂ ತಲೆ ಬಿಸಿ ಆಯಿತು.

ಸರಿ ಈ ಕಥೆಗಳೆಲ್ಲಾ ಬೇಡ ಬೇರೆ ಒಳ್ಳೆಯ ಅಭ್ಯಾಸ ಮಾಡಿಸೋಣ ಅಂತ ಬೆಳಿಗ್ಗೆ ಬೇಗ ಏಳಬೇಕು ಅದಕ್ಕೆ ಒಂದು ಗಾದೆ ಇದೆ 'ಬೇಗ ಎದ್ದ ಪಕ್ಷಿಗೆ ಹುಳು ಹುಪ್ಪಟೆ ಚೆನ್ನಾಗಿ ಸಿಗುತ್ತೆ' ಅಂತ ಹೇಳಿದೆ. ಅದಕ್ಕೆ ಅವನು ಹೇಳಿದ ಎಲ್ಲಾ ಸುಳ್ಳು ಪಕ್ಷಿ ಬೇಗ ಎದ್ದುಬಿಟ್ಟರೆ ಹುಳು ಹುಪ್ಪಟೆ ಮಲಕ್ಕೊಂಡೇ ಇರುತ್ತೆ ಅವು ಯಾಕೆ ಬೇಗ ಎದ್ದ ಹಕ್ಕಿ ಬಾಯಿಗೆ ಸಿಗುತ್ತೆ ಅಂದ. ಸರಿ ಮಹರಾಯ ಅಂತ ಹೇಳಿ ಅವನಿಗೆ ಬುದ್ಧಿ ಹೇಳೋದು ಬಿಟ್ಟು ನಾನೇ ಬುದ್ದಿ ಕಲಿತುಕೊಂಡೆ.

ಮಹಾಭಾರತದ ಕಥೆ ಶುರು ಮಾಡಿದೆ ಕಥೆನ ಅರ್ಧದಲ್ಲೇ ನಿಲ್ಲಿಸಿ ನಾನು ಕೃಷ್ಣ ಆಗ್ತೀನಿ ಅಂದ. ಸ್ವಲ್ಪ ಖುಷಿ ಆಯಿತು ಯಾಕೆ ಅಂದೆ. ನಾನು ಅಷ್ಟೊಂದು ಜನ ಹುಡುಗಿಯರ ಜೊತೆ ಯಾವಾಗಲೂ ಡ್ಯಾನ್ಸ್ ಮಾಡುತ್ತಿರಬಹುದು ಅಂದ.

ಭಾರತದ ಭಾವೀ ಜನತೆಗೆ ಇದು ಟಿ.ವಿ. ಮಹಾಭಾರತದ ಕಾಣಿಕೆ. ಮೊಮ್ಮಕ್ಕಳಿಗೆ ಕಲಿಸೋದಕ್ಕಿಂತ, ಅವರಿಂದ ಕಲಿಯೋದೇ ಕ್ಷೇಮ ಅಲ್ಲವೇ!





"ಅಯ್ಯೋ! ಬಾಳೇಹಣ್ಣೇ... ಥೂ, ಅದು ಕಾಯಿ. ತಿಂದ್ರೆ ಕಹಿಯಾಗಿರುತ್ತೆ. ಹೊಟ್ಟೆ
ನೋವು ಬರುತ್ತೆ. ಅಪ್ಪ ತರೋದೇ ಚೆನ್ನಾಗಿರೋದು
- ಅಂತ ಅಮ್ಮ ಹೇಳಿದ್ಲು ಅವತ್ತು... ನಂಗ್ಬೇಡ..."

# ಕೆಲವಂ ಬಲ್ಲವರಿಂದ ಕಲ್ತು.....

ಶಿವು

ಅದೊಂದು ಅಪೂರ್ವ ಸಂಜೆ. ಹಿಂದಿನ ಹಲವು ದಿನಗಳ ಸತತ ಮಳೆಯಿಂದಾಗಿ, ಕ್ಲಬ್ಬಿನ ಹುಲ್ಲು ಹಾಸು ಒಂದು ಹೊಸ ಹಸಿರು ಮೆರಗನ್ನು ಪಡೆದಿತ್ತು. ಹುಲ್ಲಿನ ಮೇಲೆ ಅಲ್ಲಲ್ಲೇ ಹರಡಿದ್ದ ಬಿಳಿಯ ಬಣ್ಣದ ಮೇಜು ಕುರ್ಚಿಗಳು, ಆ ದಟ್ಟ ಹಸಿರಿನ ಹಿನ್ನೆಲೆಯಲ್ಲಿ, ಪಿಕ್ಚರ್ ಪೋಸ್ಟ್‌ಕಾರ್ಡಿನಂತೆ ಒಪ್ಪವಾಗಿ ಕಾಣುತ್ತಿದ್ದವು. ಶೀನು, ಸುಹಾಸಿನಿಯವರೊಂದಿಗೆ ಆ ಸಂಜೆ ನನ್ನ ಭೇಟಿ. ಈ ದಂಪತಿಗಳೊಂದಿಗೆ ಒಂದು ಸಂಜೆಯನ್ನು ಕಳೆಯುವುದೆಂದರೆ ಅದೊಂದು Relaxing ಅನುಭವ. ಮನಸ್ಸಿಗೆ ತೋಚಿದ್ದನ್ನು ಮಾತನಾಡಿ, ಅದಕ್ಕೆ ಅರ್ಥ ಹುಡುಕುವ ಜವಾಬ್ದಾರಿಯನ್ನು ದಂಪತಿಗಳಿಗೇ ಬಿಟ್ಟು, ಅವರ ಪ್ರತಿಕ್ರಿಯೆಯನ್ನು ಕುತೂಹಲದಿಂದ ಪರೀಕ್ಷಿಸುವುದೇ ಒಂದು ಮೋಜಿನ ಕೆಲಸ. ನನ್ನಂತಹ ಬೋಳು ತಲೆಯವನನ್ನೂ ಸಹ "Letting the hair down" ಪ್ರಯೋಗಕ್ಕೆ ಪ್ರಚೋದಿಸುವಂತಹ ಗೆಳೆತನ ಅದು. ಅಂದು ನಮ್ಮ ಅತಿಥೇಯ, ಅತಿಥೇಯಣಿಯರು ದೇಶಪಾಂಡೆ ದಂಪತಿಗಳು. ಶಶಿ ದೇಶಪಾಂಡೆ ನನಗೇನು ಹೊಸಬರಲ್ಲ. ಅವರ ತಂದೆ ಶ್ರೀರಂಗರ ಮನೆ ನಮ್ಮ ಬೀದಿಯಲ್ಲೇ. ರಾ.ಶಿ. ಮತ್ತು ಶ್ರೀರಂಗರದ್ದು ತೀರಾ ನಿಕಟ ಗೆಳೆತನ. ದಿನನಿತ್ಯ ಬೆಳಗ್ಗೆ ನಮ್ಮ ಮನೆಯ ಹಜಾರದಲ್ಲಿ ಅವರಿಬ್ಬರು ಭೇಟಿ ಮಾಡುತ್ತಿದ್ದುದು, ಬೆಳಗಿನ ಉಪಹಾರದೊಂದಿಗೆ ಅವರು ನಡೆಸುತ್ತಿದ್ದ ಸ್ವಾರಸ್ಯಕರವಾದ ಹರಟೆ ಇವೆಲ್ಲಾ ಇನ್ನೂ ಕಣ್ಣಿಗೆ ಕಟ್ಟಿದ ಹಾಗಿದೆ. ಆ ದಿನಗಳಲ್ಲಿ ನಾನು ಹಲವು ಬಾರಿ ಶಶಿಯವರನ್ನು ಭೇಟಿ ಮಾಡಿದ್ದರೂ ಅನಂತರ ಅನೇಕ ವರ್ಷಗಳ ಕಾಲ ಸಂಪರ್ಕ ಕಡಿದುಹೋಗಿತ್ತು. ಹಾಗಾಗಿ ಬಹು ದಿನಗಳ ನಂತರ ಈ ಭೇಟಿ ಸಹಜವಾಗಿಯೇ ಸಡಗರವನ್ನು ತಂದಿತ್ತು. ಅದಕ್ಕಿಂತ ಹೆಚ್ಚಾಗಿ ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರುವ ಇಂಗ್ಲೀಷ್ ಕಾದಂಬರಿಕಾರ್ತಿಯೊಬ್ಬರೊಡನೆ ಮಾತನಾಡುವ ಅವಕಾಶವೆಂದರೇನು ಸಾಮಾನ್ಯವೇ.

ಕನ್ನಡ ಮಹಿಳಾ ಸಾಹಿತಿಗಳ ಬರವಣಿಗೆಯಲ್ಲೊಂದು ವಿಚಿತ್ರ ಕಂಡು ಬರುತ್ತದೆ ಎಂದು ಶೀನು ಪ್ರಾರಂಭಿಸಿದ. ಶಶಿಯವರಿಗೆ ಕನ್ನಡ ಸಾಹಿತ್ಯದ ಪರಿಚಯ ಅಷ್ಟಾಗಿ ಇರಲಿಲ್ಲ. ಹಾಗಾಗಿ ಶೀನು ಏನು ಹೇಳಿದರೂ ನಡೆಯುತ್ತಿತ್ತು. ಹತ್ತು ಪುಟಕ್ಕೊಮ್ಮೆ ಗೋದಕ್ಕ ಹೂರಣದ ಒಬ್ಬಟ್ಟನ್ನೋ, ವಡ್ಡ ಮುರುಕವನ್ನೋ ಮಾಡುವ ವಿಧಾನದ ಸುಧೀರ್ಘ ವಿವರಣೆ, ಮೂವತ್ತನೇ ಪುಟ ದಾಟಿದಂತೆ, ಗುಂಗರು ಕೂದಲಿನ ಮೋಹನ ಮನೆಗೆ ಬಂದಾಗ, ಅವರಮ್ಮ ಅವನಿಗೆ ಅತೀವ ವಿಶ್ವಾಸದಿಂದ ಊಟಬಡಿಸುವ ವಿಧಾನ ಇವೆಲ್ಲ ನಮ್ಮ ಲೇಖಕಿಯರ ಮಾಮೂಲು ಸರಕು ಎಂದು ಶೀನು ಹೇಳಿದ.

ಅದರಲ್ಲೇನು ತಪ್ಪು ಶೀನು, ಅವರವರ ಪರಿಸರದಲ್ಲಿ ಅವರವರಿಗಿರುವ ನೈಜ ಅನುಭವವನ್ನು ಬರೆಯುವುದು ಕಾದಂಬರಿಕಾರರ ಆದ್ಯ ಕರ್ತವ್ಯವಲ್ಲವೇ ಅಂದರು ಡಾ|| ದೇಶಪಾಂಡೆ.

ತಮ್ಮ ಸ್ವಂತ ಅನುಭವಗಳನ್ನು ಬರೆಯುತ್ತಲೇ, ಅದರ ಮೂಲಕ ವಿಶ್ವ ಸಂವೇದನೆಯತ್ತ ಓದುಗನನ್ನುಕೊಂಡೊಯ್ಯುವುದು ಒಳ್ಳೆಯ ಕಾದಂಬರಿಕಾರನ ಉದ್ದೇಶವಾಗಿರಬೇಕು. From the personal to the universal ಅಂದರು ಶಶಿ.

ನಾನು ಶಶಿಯವರು ಬರೆದ ಯಾವ ಕಾದಂಬರಿಯನ್ನೂ ಓದಿರಲಿಲ್ಲ. ಹಿಂದೊಮ್ಮೆ ಅವರು ಡೆಕ್ಕನ್‌ಹೆರಾಲ್ಡ್‌ಗೆ ಬರೆದಿದ್ದ "The Intrusion' ಎಂಬ ಕಥೆಯೊಂದನ್ನು ಓದಿದ ನೆನಪು.

ನಿಮ್ಮ "Intrusion' ಕಥೆ ಚೆನ್ನಾಗಿ ಮೂಡಿ ಬಂದಿತ್ತು. ಹೊಸದಾಗಿ ಮದುವೆಯಾದ ದಂಪತಿಗಳು ಮಧುಚಂದ್ರಕ್ಕೆ ಹೋದಾಗ, ವಧು ಅನುಭವಿಸುವ ಆತಂಕ, ತೀರಾ ಹೊಸಬನೊಂದಿಗೆ ತೀರಾ ನಿಕಟವಾಗಿ ವರ್ತಿಸಬೇಕಾದ ವಿಪರ್ಯಾಸದ ಪರಿಸ್ಥಿತಿ ಇವೆಲ್ಲವನ್ನೂ ಚೆನ್ನಾಗಿ ಪ್ರಸ್ತಾಪಿಸಿದ್ದೀರಿ. ಆದರೆ ಆ ಕಥೆ ಓದಿದಾಗ ನನಗನ್ನಿಸಿದ್ದು ಇದು. ಹೊಸ ಹೆಂಡತಿಗೆ ಆತಂಕ ಗಾಭರಿ ಆಗಬಾರದೆಂದು ಆ ಪತಿರಾಯ ಸುಮ್ಮನೆ ಕುಳಿತಿದ್ದರೆ, ಆ ವಧು ಅವನಿಗೆ ನಾನ್‌ಪರ್‌ಫಾರ್ಮರ್ ಹಣೆ ಪಟ್ಟಿಕಟ್ಟಿ ವಿಚ್ಛೇದನಕ್ಕೆ ಸಿದ್ಧಳಾಗುತ್ತಿದ್ದಳೇನೋ. ಆ ನತದೃಷ್ಟ ಪತಿಯ ದೃಷ್ಟಿಕೋನದಿಂದಲೂ ಒಂದು ಕಥೆ ಬರೆಯಬಹುದಲ್ಲವೇ ಎಂದು ನಾನುಕೇಳಿದೆ.

ನೀವು ಹೇಳುವುದು ನಿಜ. ನನಗೆ ಹೊಳೆದದ್ದು ವಧುವಿನ ದೃಷ್ಟಿಕೋನ. ಬೇರೆ ಯಾರಾದರೂ ಬೇರೆ ದೃಷ್ಟಿಕೋನದಿಂದ ಬರೆದರೆ ನನ್ನದೇನೂ ಅಭ್ಯಂತರವಿಲ್ಲ ಅಂದರು ಶಶಿ.

ನನಗೆ ಪ್ರಿಯವಾದ ಹಲವು ಇಂಗ್ಲೀಷ್ ಬರಹಗಾರರ ಬಗ್ಗೆ ಶಶಿಯವರ ಅಭಿಪ್ರಾಯ ತಿಳಿಯುವುದಕ್ಕೆ ನನಗೆ ಅತೀವ ಕುತೂಹಲ. ನಮ್ಮ ಸ್ವಂತ ಅಭಿಪ್ರಾಯ, ಅನಿಸಿಕೆಗಳಿಗೆ ಖ್ಯಾತನಾಮರ Validation ಪಡೆಯುವ ಹಂಬಲ ಒಂದು ವಿಚಿತ್ರ ಪ್ರವೃತ್ತಿ.

ವಿಕ್ರಂ ಸೇಠ್‌ರ ಗೋಲ್ಡನ್‌ಗೇಟ್ ಪುಸ್ತಕವನ್ನು ನಾನು ತುಂಬಾ ಇಷ್ಟಪಟ್ಟೆ ನಿಮಗೇನನ್ನಿಸುತ್ತೆ ಶಶಿಯವರೇ ಎಂದು ಕೇಳಿದೆ.

ಆ ಪದ್ಯರೂಪದ ಪುಸ್ತಕದಲ್ಲಿ ವಿಕ್ರಂ ಪ್ರಾಸಕ್ಕೇ ಹೆಚ್ಚುಪ್ರಾಧಾನ್ಯ ಕೊಟ್ಟಂತಿತಪ್ಪ. ಆ ಡಿಂಗ್ ಡಾಂಗ್ ಪದ್ಯಗಳನ್ನು ಹತ್ತು ಪುಟಕ್ಕಿಂತ ಹೆಚ್ಚಿಗೆ ಅರಗಿಸಿಕೊಳ್ಳಲಾಗಲಿಲ್ಲ ಅಂದರು ಶಶಿ.

ನನ್ನ ಮೊದಲನೇ ನಿರಾಶೆ! ಆದರೂ ನನ್ನ ಪ್ರಯತ್ನ ಮುಂದುವರೆಸಿದೆ.

ಜಾನ್ ಅಪ್‌ಡೈಕ್ ಬಗ್ಗೆ ಏನು ಹೇಳುತ್ತೀರಿ?

ಆ ಪೋರ್ನೋ ಬರಹಗಾರನೇ. ಅವನ ಪುಸ್ತಕ ಕಪಲ್ಸ್ ಓದಿದ ಮೇಲೆ ಅವನ ಇನ್ನ್ಯಾವ ಪುಸ್ತಕ ಓದಲು ಉತ್ಸಾಹ ಬರಲಿಲ್ಲ ಎಂಬ ಉತ್ತರ ಬಂದಿತು.

ಹಾಗೇನಿಲ್ಲ ಶಶಿಯವರೇ, ಅವನ ಕೆಟ್ಟ ಪುಸ್ತಕವೊಂದು ನಿಮಗೆ ಮೊದಲು ಸಿಕ್ಕಿದ್ದು ದುರಾದೃಷ್ಟ. ಅಪ್‌ಡೈಕ್ ಬರೆದ 'ರಾಜರ್ಸ್ ವರ್ಷನ್' ಓದಿದರೆ ದೇವರು ಎಂಬ ಕಲ್ಪನೆಯ ಬಗ್ಗೆ ಮನುಕುಲದ ವಿವಿಧ ಜನಾಂಗಗಳು ಹೊಂದಿರುವ ನಂಬಿಕೆಗಳ ಪ್ರೌಢ ವಿಶ್ಲೇಷಣೆ ಇದೆ. ಬೇಕೆಂದರೆ ನಿಮಗೆ ಆ ಪುಸ್ತಕ ಎರವಲು ಕೊಡುತ್ತೇನೆ ಎಂದೆ.

ಅವರಿಂದ ಪುಸ್ತಕ ಓದುತ್ತೇನೆ ಎಂಬ ಆಶ್ವಾಸನೆ ಪಡೆದು, ನೀವು ಮೆಚ್ಚಿರುವ ಇಂಗ್ಲೀಷ್ ಬರಹಗಾರು ಯಾರು? ಅವರ ಯಾವ ಪುಸ್ತಕ ಶಿಫಾರಸ್ಸು ಮಾಡುತ್ತೀರಿ ಎಂದು ಕೇಳಿದೆ. ಅಮಿತಾವ್ ಘೋಷ್‌ರ ದ ಷಾಡೋ ಲೈನ್ಸ್ ಬಹಳ ಚೆನ್ನಾಗಿದೆ ಓದಿದ್ದೀರ ಅಂತ ಕೇಳಿದರು ಅಮಿತಾವ್ ಘೋಷ್ ಹೆಸರು ಕೇಳಿದ್ದೆ ಅಷ್ಟೇ. ಇಂಡೋ ಆಂಗ್ಲಿಯನ್ ಬರಹಗಾರೆಂದರೆ ನನಗೆ ಮೊದಲಿನಿಂದಲೂ ಅಷ್ಟಕ್ಕಷ್ಟೇ. ಸಹಸ್ರಾರು ಇಂಗ್ಲೀಷ್ ಕಾದಂಬರಿಕಾರರನ್ನು ಬಿಟ್ಟು ಈಗೆ ಭಾರತೀಯನೊಬ್ಬನ ಹೆಸರು ಹೇಳಿದ್ದು ನನಗೆ ತೀರಾ ಆಶ್ಚರ್ಯವೆನಿಸಿತು. ಆ ಪುಸ್ತಕವನ್ನು ನಾನು ಓದಿರದಿದ್ದುದರ ಬಗ್ಗೆ ನಾಚಿಕೆಯೂ ಆಯಿತನ್ನಿ.

ಮಾರನೆಯ ದಿನವೇ ಆ ಪುಸ್ತಕ ಕೊಂಡುಕೊಂಡೆ. ಪ್ಲೊ ಚೆನ್ನಾಗಿತ್ತು.ಎರಡೇ ದಿನಗಳಲ್ಲಿ ಓದಿ ಮುಗಿಸಿದೆ.

'ದ ಷಾಡೋ ಲೈನ್ಸ್' ನಲ್ಲಿ ಎದ್ದು ಕಾಣುವುದು ಅಮಿತಾವ್‌ನ ಬರಹದ ಶೈಲಿ. ಅಮಿತಾವ್ ಚಿಕ್ಕಂದಿನಲ್ಲಿ ನೋಡಿದ್ದ ಕಲ್ಕತ್ತಾ, ಎರಡನೇ ಮಹಾಯುದ್ಧದಲ್ಲಿ ಜರ್ಮನ್ ಬಾಂಬ್‌ಗಳಿಂದ ತತ್ತರಿಸಿದ ಲಂಡನ್, ಆಧುನಿಕ ಇಂಗ್ಲೆಂಡ್ ಪರಿಸರ ಇವೆಲ್ಲಾ ಒಂದಕ್ಕೊಂದು ಬಹು ಸರಾಗವಾಗಿ ಬೆರೆತು ಒಂದು ಅಪೂರ್ವ ಲೋಕವನ್ನು ಸೃಷ್ಟಿಸುತ್ತವೆ. ಅಮಿತಾವ್‌ನ ಚಿಕ್ಕಜ್ಜಿ ಮಾಯಾದೇಬಿ (ಈ ಬೆಂಗಾಲಿಗಳಿಗೆ ದೇವಿ ಅನ್ನುವುದಕ್ಕೆ ಬಿಗುಮಾನ) ಅವನ ಕಸಿನ್ ಹಾಗೂ ಹಾರ್ಟ್‌ಥ್ರಾಬ್ ಇಳಾ, ಇನ್ನೊಬ್ಬ ಆದರ್ಶವಾದಿ ಕಸಿನ್ ತ್ರಿದಿಬ್, ಹಾಗೆ ಅನೇಕ ಪಾತ್ರಗಳು ಅಮಿತಾನ್‌ನ ಲೇಖಣಿಯಿಂದ ಜೀವ ತುಂಬಿಕೊಂಡು ನಮ್ಮ ಕಣ್ಣ ಮುಂದೆ ಹಾದು ಹೋಗುತ್ತವೆ. ಒಂದು ಬೆಂಗಾಲಿ ಅವಿಭಕ್ತ ಕುಟುಂಬದ ಆಗು ಹೋಗುಗಳನ್ನು ಓದುತ್ತಿದ್ದಂತೆ, ಭಾರತದ ಯಾವುದೇ ಮೂಲೆಯಲ್ಲಿರುವ ಕುಟುಂಬದ ನಡವಳಿಗೆ, ಆಲೋಚನಾ ಸರಣಿ ಇವುಗಳೊಂದಿಗೆ ಇರುವ ಸಾಮ್ಯ ನಮ್ಮನ್ನು ಚಕಿತಗೊಳಿಸುತ್ತದೆ. ಒಟ್ಟಿನಲ್ಲಿ ದ ಷಾಡೋ ಲೈನ್ಸ್ ಆಸಕ್ತಿ ಮೂಡಿಸುವ ಶೈಲಿಯಲ್ಲಿ ಬರೆದಿರುವ ಸರಳವಾದ ಕಥೆ. ಆದರೆ ಕಥಾ ವಸ್ತುವಿಗೂ ಮಿಗಿಲಾದ ಅಂಶವೆಂದರೆ, ಅಮಿತಾವ್, ನಮ್ಮ ದೇಶಕ್ಕೆ ಬಡಿದಿರುವ ಕೋಮುದ್ವೇಷದ ಶಾಪದ ಬಗ್ಗೆ ಸಂವೇದನೆಯಿಂದ ಅತ್ಯಂತ ಹೃದಯಸ್ಪರ್ಶಿಯಾಗಿ ಬರೆದಿರುವ ಕಸುಬುಗಾರಿಕೆ. ಅಮಿತಾವ್ ಚಿಕ್ಕವನಾಗಿದ್ದಾಗಲೇ ಅವನ ಕಸಿನ್ ತ್ರಿದಿಬ್, ಆಗಿನ ಪೂರ್ವ ಪಾಕಿಸ್ಥಾನದ ಖುಲ್ನಾಗೆ ಹೋಗಿದ್ದಾಗ ಅಲ್ಲಿ ನಡೆದ ಕೋಮು ಗಲಭೆಯಲ್ಲಿ ಸಿಕ್ಕಿಕೊಂಡು ಅಸುನೀಗಿರುತ್ತಾನೆ. ಕಾಶ್ಮೀರದ ಹಸ್ರತ್‌ಬಲ್ ದರ್ಗಾದಿಂದ ಕಳುವಾದ ಪ್ರಾಫೆಟ್ ಮಹಮ್ಮದರ ಕೂದಲು ಈ ಗಲಭೆಗೆ ಮೂಲ ಕಾರಣವಾಗಿತ್ತುದೆ. ಎಲ್ಲೋ ದೂರದ ಕಾಶ್ಮೀರದಲ್ಲಿ ನಡೆದ ಕೂದಲ ಕಳವಿಗೂ ಕಲ್ಕತ್ತಾದ ನೆರೆಯುಲ್ಲಿನ ಖುಲ್ನಾದ ಗಲಭೆಯಲ್ಲಿ ತ್ರಿದಿಬ್ ಅಸುನೀಗಿದ್ದಕ್ಕೂ ಇದ್ದ ಸಂಬಂಧ ಅಮಿತಾವ್‌ನ ಕಲ್ಪನೆಗೆ ಸಿಲುಕದ್ದು. ಮುಂದೆ ಅಮಿತಾವ್ ಕಾಲೇಜ್‌ವಿದ್ಯಾರ್ಥಿಯಾಗಿ ದೆಹಲಿಯಲ್ಲಿ ಓದುತ್ತಿದ್ದಾಗ ಈ ಗಲಭೆಗಳ ಪ್ರಸ್ತಾಪ ಬಂದಾಗ ಆ ಗಲಭೆಗಳ ನಿಷ್ಕಾರಣ ಕ್ರೌರ್ಯದ ಬಗ್ಗೆ ಬಾಲ್ಯದಲ್ಲಿ ಮೂಡಿದ ಒಗಟುಗಳು ಒಗಟುಗಳಾಗಿಯೇ ಉಳಿದಿರುತ್ತವೆ. ಅಮಿತಾವ್ ಹೇಳುತ್ತಾನೆ.

A few months after I had made my discovery in the Teen Murti Library, I found,

at the bottom of my bookshelf, the tattered old Bartholomew's Atlas in which Tridib used to point out places to me when he told me stories in his room. Mayadebi had given it to me many years before.

One day, when it was lying open on my desk in my hostel room, quite by chance I happened to find a rusty old compass at the back of my drawer. It had probably been forgotten there by the person who had lived in the room before me.

I picked it up, and toying with it, I placed its point on Khulna and the tip of the pencil on Srinagar.

It was an amazing circle.

Beginning in Sringar and travelling anti-clockwise, it cut through the Pakistani half of Punjab, through the tip of Rajasthan and the edge of Sind, through the Rann of Kutch, and across the Arabian Sea, through the southernmost toe of the Indian Peninsula, through Kandy, in Sri Lanka, and out into the Indian Ocean until it emerged to touch upon the northernmost finger of Sumatra, then straight through the tail of Thailand, into the Gulf to come out again in Thailand, running a little north of Phnom Penh, into the hills of Laos, past Hue in Vietnam, dipping into the Gulf of Tonking, then swining up again through the Chinese province of Yunnan,past Chungking, across the Yangtze Kiang, passing within sight of the Great Wall of China, through Inner Mongolia and Sinkiang, until with a final leap over the Karakoram Mountains it dropped again into the valley of Kashmir.

It was a remarkable circle: more than half of mankind must have fallen within it.

And so,fifteen years after his death, Tridib watched over me, as I tried to learn the meaning of distance. His atlas showed me, for example, that within the tidy ordering of Edi:clidean space, Chiang Mai in Thailand was much nearer Calcutta than Delhi is; that Chengdu in China is nearer than Srinagar is. Yet, I had never heard of those place until I drew my circle, and I cannot remember a time when I was so young that I had not heard of Delhi of Srinagar. It showed me that Hanoi and Chunking are nearer Khulna than Srinagar, and yet, did the peopele of Khulna care at all about the fate of the mosques in Vietnam and South China (a mere stone's throw away)? I doubted it. But in this other direction, it took no more than a week....

ಈ ಸಾಲುಗಳನ್ನು ಓದುತ್ತಿದ್ದಾಗ ಹಿಂದೊಮ್ಮೆ ಯಾರೋ ಹೇಳಿದ ""The horror of the situation is that there is no horror felt about it" ಹೇಳಿಕೆ ನೆನಪಿಗೆ ಬಂತು. ಒಂದು ಸಂವೇದನಾಶೀಲ ಮನಸ್ಸು ನಮ್ಮ ಸುತ್ತಲಿನ ಆಗುಹೋಗುಗಳನ್ನು ಎಷ್ಟು ಸೂಕ್ಷ್ಮವಾಗಿ ಕಾಣಬಹುದು ಎಂಬುದಕ್ಕೆ ಈ ಪುಸ್ತಕ ಉತ್ತಮ ಉದಾಹರಣೆ.

ಮೊನ್ನೆ ಎಂ. ಜಿ. ರಸ್ತೆಯಲ್ಲಿ ನಡೆಯುತ್ತಿದ್ದಾಗ ಸೀರೆ ಅಂಗಡಿಯೊಂದರ ಮುಂದೆ ""Double Bonanza" ಎಂಬ ಫಟಕ ಕಣ್ಣಿಗೆ ಬಿತ್ತು. ಆ ಸಂಜೆ, ಶಶಿಯವರೊಡನೆ ಭೇಟಿ, ಅದರ ಫಲಶ್ರುತಿಯಾಗಿ ಅಮಿತಾವ್‌ರ ಪರಿಚಯ ಇವೆರಡು ನನ್ನ ಮಟ್ಟಿಗೆ ''ಡಬ್ಬಲ್ ಬೊನಾನ್ಸಾ!''

# ಸಪ್ಲೈ ಇಲ್ಲ

ಕಂ.ಭಂ. ಕೃಷ್ಣಮೂರ್ತಿ

ಎಲ್ಲಿ ಹೋಗಿ ಏನು ಕೇಳಿದರೂ 'ಸಪ್ಲೈ ಇಲ್ಲ' ಎಂಬ ಮಾತೇ ಇತ್ತೀಚೆಗೆ ಹೆಚ್ಚಾಗಿ ಕೇಳಿ ಬರುತ್ತಿದೆ. ''ಗ್ಯಾಸ್ ಮುಗಿದು ಹೋಗಿದೇಂತ ಕಡೆ ಘಳಿಗೆಯಲ್ಲಿ ಪಾಕ ಶಾಲೆಯಿಂದ ಧ್ವನಿ ಬಂದಾಗ, ಗಂಡ ದುಡು ದುಡು ಗ್ಯಾಸ್ ಏಜೆನ್ಸಿಗೆ ಓಡುತ್ತಾನೆ.'' ''ಇಪ್ಪತ್ತು ದಿನದೊಳಗೆ ಸಿಲೆಂಡರ್ ಕಳಿಸ್ತೀವಿ'' ಎಂದು ಏಜನ್ಸಿಯಾತ ಹೇಳಿದಾಗ ''ಅಷ್ಟೊಂದು ಲೇಟ್ ಯಾಕೆ'' ಎಂದು ಅವನು ಅಸಹನೆಯಿಂದ ಕೇಳುತ್ತಾನೆ. ಅದಕ್ಕೆ ''ಸಿಲಿಂಡರ್ ಸಪ್ಲೈನೆ ಇಲ್ಲ ಸಾರ್'' ಎಂಬ ಉತ್ತರ ಸಿದ್ಧವಾಗಿರುತ್ತದೆ. ನ್ಯಾಯಬೆಲೆ ಅಂಗಡಿಗೆ ಹೋಗಿ ಸೀಮೆ ಎಣ್ಣೆಯಿಂದ ಮೊದಲುಗೊಂಡು ಏನು ಕೇಳಿದರೂ ''ಸಪ್ಲೈ ಇಲ್ಲ'' ಎನ್ನದೆ, ''ಸಪ್ಲೈ ಬರಬೇಕು ಸ್ವಾಮಿ'' ಎಂದು ಮೂಗಿಗೆ ತುಪ್ಪ ಸವರುವ ಮಾತಾಡಿ ಕಳಿಸುತ್ತಾರೆ ಅವರು.

''ನಮ್ಮ ಬಡಾವಣೆಯಲ್ಲಿ ಎರಡು ದಿನದಿಂದ ಕರೆಂಟಿಲ್ಲ ಸ್ವಾಮಿ'' ಹತ್ತು ಸಾವಿರ ಮೆಗಾವಾಟ್ ಬೇಕಿರೋಕಡೆ, ಮೂರು ಸಾವಿರ ಉತ್ಪಾದನೆಯಾದರೆ ಏನ್ರಿ ಮಾಡೋದು? ಪವರ್ ಸಪ್ಲೈಯಿಲ್ಲದಿದ್ರೆ ನಾವೇನು ತಲೆ ಚಚ್ಚಿಕೊಳ್ಳೋಕಾಗುತ್ತೆ?'' ಎಂದು ಅವರ ಗೋಳು ತೋಡಿಕೊಳ್ಳುತ್ತಾರೆ.

ಜಲಮಂಡಲಿಯವರದಂತು ಬಲು ಅಚ್ಚುಕಟ್ಟು. ಲಕ್ಷಣವಾಗಿ ಎರಡು ಮೂರು ದಿನ ಯಾರ ಮುಲಾಜು ಇಲ್ಲದ ಜಲ ಸ್ತಂಭನ ಮಾಡಿಬಿಡುತ್ತಾರೆ. ''ತಿಪಗೊಂಡನ ಹಳ್ಳಿಯಿಂದ ನೀರು ಸಪ್ಲೈ ಇಲ್ಲದ್ದರಿಂದ, ನಗರದಲ್ಲಿ ಇನ್ನು ನಾಲ್ಕು ದಿವಸ ನೀರಿರುವುದಿಲ್ಲ. ಸಾರ್ವಜನಿಕರು ಸಹಕರಿಸಬೇಕು'' ಎಂದು ಪ್ರಸಾರ ಮಾಧ್ಯಮಗಳ ಮೂಲಕ ವಿನಂತಿಸಿಕೊಂಡು ತಣ್ಣಗೆ ಕೂಡುತ್ತಾರೆ. ಅಲ್ಲಿಗೆ ಅವರ ಜವಾಬ್ದಾರಿ ಮುಗಿದಂತೆ.

ಅಂತೂ ಸಪ್ಲೈಯಿಲ್ಲ ಎನ್ನುವ ಸುವ್ವಿರಾಗ ಯಾವ ಖಾತೆಗೆ ಹೋದರೂ ಕೇಳಿಬರುತ್ತೆ. ಬ್ಯಾಂಕಿನಲ್ಲೂ ಈ ಬವಣೆ ತಪ್ಪಿದ್ದಲ್ಲ. ರಾಷ್ಟ್ರೀಕೃತ ಬ್ಯಾಂಕೊಂದಕ್ಕೆ ಗ್ರಾಹಕರೊಬ್ಬರು ಹೋಗಿ ''ಡಿ.ಡಿ. ಪರ್ಚೇಸ್ ಮಾಡ್ಬೇಕು, ರಿಕ್ವಿಸಿಮಾನ್ ಫಾರಂ ಕೊಡಿ'' ಅಂತ ಕೇಳಿದರು. ''ಫಾರಂ ಸಪ್ಲೈಯಿಲ್ಲ ಸ್ವಾಮಿ, ಇಂಡೆಂಟ್ ಮಾಡಿದೀವಿ ಇನ್ನೂ ಬಂದಿಲ್ಲ. ಬ್ಯಾಂಕ್ ಸ್ಪೆಸಿಮನ್‌ಯಿದೆ, ಅದನ್ನ ಜೆರಾಕ್ಸ್ ಮಾಡಿಸ್ಕೊಂಡು ಬನ್ನಿ'' ಎಂದು ಬ್ಯಾಂಕಿನ ಶಾಖಾಧಿಕಾರಿ ಹೇಳಿದಾಗ, ಗ್ರಾಹಕರಿಗೆ ಬೇರೆ ದಾರಿಯೆ ಇರಲಿಲ್ಲ. ಸಪ್ಲೈಯಿಲ್ಲ ಎನ್ನುವುದು ಎಲ್ಲಾ ಬಾಬಿನಲ್ಲೂ ರೂಢನಾಮವಾದಂತಿದೆ.

ಗುಂಡಪ್ಪನ ಮನೆಯಲ್ಲಿ ಎಲೆಕ್ಟ್ರಿಕ್ ಮೀಟರ್ ಕೆಟ್ಟು ಕೂತಿತ್ತು. ''ಮೀಟರ್ ಕೆಟ್ಟಿದೆ ಬದಲಾಯಿಸಬೇಕೂಂತ ಮೊದಲು ಒಂದು ಅರ್ಜಿ ಕೊಡಿ. ಇಲ್ದಿದ್ರೆ ಪ್ರೊರ್ರ್ಯಾಟ ಛಾರ್ಜ್ ಮಾಡೋದಲ್ದೆ ಕನೆಕ್ಷನ್ನೂ ಕಿತ್ತು ಹಾಕ್ಬಿಡ್ತಾರೆ.'' ಎಂದು ವಿದ್ಯುಚ್ಛಕ್ತಿ ಮಂಡಳಿಯ ನೌಕರರೊಬ್ಬರು ಅವನನ್ನು ಹೆದರಿಸಿದರು. ಗುಂಡಪ್ಪ ತಡಮಾಡದೆ ಅರ್ಜಿ ಬರೆದು ಇಲಾಖೆಯ ಮುಖ್ಯಸ್ಥರಿಗೆ ಕೊಟ್ಟ. ಆರು ತಿಂಗಳಾಯ್ತು ವರ್ಷವಾಯ್ತು ಅದರ

ಸುದ್ದಿಯೇ ಇಲ್ಲ. ಖುದ್ದು ಹೋಗಿ ಅಧಿಕಾರಿಯನ್ನು ನೋಡಿ ಅರ್ಜಿಯ ವಿಷಯ ನೆನಪಿಸಿದ. ''ಅದಕ್ಯಾಕ್ರಿ ತಲೆ ಕೆಡಿಸ್ಕೋತೀರ. ಒಂದು ವರ್ಷದಿಂದ ನಮಗೆ ಮೀಟರ್ ಸಪ್ಲೈನೆ ಇಲ್ಲ. ಯಾವಾಗ ಬರುತ್ತೊ ಹೇಳೂಕಾಗುಲ್ಲ. ಬಂದಾಗ ನಾವೇ ನಿಮಗೆ ಇನ್‌ಟಿಮೇಟ್ ಮಾಡ್ತೀವಿ. ಹೋಗಿ, ಪದೇ ಪದೆ ಬಂದು ಕಾಡಬೇಡಿ'' ಎಂದು ಆ ಅಧಿಕಾರಿ ಅಸಹನೆಯಿಂದ ಹೇಳಿ, ತನ್ನ ಮುಂದಿದ್ದ ಕಡತಗಳನ್ನು ಕೆದಕುತ್ತಾ ಕೂತರು.

ಎಲ್ಲೆಲ್ಲೂ ''ಸಪ್ಲೈ ಇಲ್ಲ, ಇಲ್ಲ'' ಅನ್ನುವ ಉತ್ತರ ಕೇಳೀ ಕೇಳಿ ಗುಂಡಪ್ಪನ ತಲೆ ಚಿಟಗುಟ್ಟಿತು. ಸೀದಾ ಕಾಮತರ ಹೋಟೇಲಿಗೆ ಬಂದು ಕೂತ. ಹೋಟೆಲ್ ಗ್ರಾಹಕರಿಂದ ತುಂಬಿತ್ತು ಮಾಣಿಗಳು ಟ್ರೆ ಹೊತ್ತು ಸರಬರ ಓಡಿಯಾಡುತ್ತಿದ್ದರು. ಅರ್ಧ ಘಂಟೆ ಕಾದರೂ ಯಾವ ಮಾಣಿಯೂ ಏನು ಬೇಕೆಂದು ಗುಂಡಪ್ಪನನ್ನು ವಿಚಾರಿಸಲಿಲ್ಲ. ಅವನು ರೇಗಿಕೊಂಡು, ಗಲ್ಲದ ಮೇಲೆ ಕೂತು ನೋಟುಗಳನ್ನು ಬಾಚಿಕೊಳ್ಳುತ್ತಿದ್ದ ಮ್ಯಾನೇಜರ ಹತ್ತಿರ ಹೋಗಿ, ದಬಾಯಿಸಿದ ''ಏನು ಮಾರಾಯರೆ ನಿಮ್ಮ ಪಿರಿ ಪಿರಿ, ಅಲ್ಲಿ ಸಪ್ಲೈಯಿಲ್ಲಾಂತ ಬೋರ್ಡು ಉಂಟಲ್ಲವೋ'' ಎಂದು ಮ್ಯಾನೇಜರ್ ಹೇಳಿದಾಗ ಗುಂಡಪ್ಪನಿಗೆ ಮೂರ್ಛೆ ಬರುವಂತಾಯಿತು.

ಅವನು ಕಾಲೆಳೆಯುತ್ತಾ ಬರುತ್ತಿದ್ದಾಗ ಉದ್ಯೋಗ ವಿನಿಮಯ ಕಛೇರಿಯ ಮುಂದೆ ನೂರಾರು ಮಂದಿ ಸಾಲು ಕಟ್ಟಿ ನಿಂತಿದ್ದನ್ನು ನೋಡಿದ. ನಿರುದ್ಯೋಗಿಗಳು ಅಲ್ಲಿ ತಮ್ಮ ಹೆಸರನ್ನು ನೊಂದಾಯಿಸುತ್ತಿದ್ದರು. ಸಪ್ಲೈಯಿಲ್ಲಾಂತ ಎಲ್ಲಾ ಕಡೆಯೂ ತಾರಮ್ಮಯ್ಯ ಆಡಿಸಿದ್ದನ್ನು ನೋಡಿ ಕಂಗೆಟ್ಟಿದ್ದ ಗುಂಡಪ್ಪನಿಗೆ, ಅಟ್‌ಲೀಸ್ಟ್ ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಪ್ಲೈಯಾದರೂ ನಿರಂತರವಾಗಿರುವುದನ್ನು ಕಂಡು ಬಲು ಖುಷಿಯಾಯಿತು.

---

## ಆಧುನಿಕ ವಚನಗಳು -ಶಂಸ

ಧರ್ಮಪ್ರಿಯ ಆಫೀಸರ್ ಎಂಬರು,
ಧರ್ಮಪ್ರಿಯ ಆಫೀಸರ್ ಅಲ್ಲವಯ್ಯಾ.
ನ್ಯಾಯಪ್ರಿಯ ಆಫೀಸರ್ ಎಂಬರು,
ನ್ಯಾಯಪ್ರಿಯ ಆಫೀಸರ್ ಅಲ್ಲವಯ್ಯಾ.
ಧರ್ಮವ ಅನುಸರಿಸಿದ ಆಫೀಸರ್‌ಗೆ
ಟ್ರಾನ್ಸ್‌ಫರ್ ಆಗಿತ್ತು.
ನ್ಯಾಯನ ಪಾಲಿಸಿದ ಆಫೀಸರ್‌ಗೆ
ಸಸ್‌ಪೆನ್ಷನ್ ಆಗಿತ್ತು.
ಧರ್ಮಪ್ರಿಯನೂ ಅಲ್ಲ,
ನ್ಯಾಯಪ್ರಿಯನೂ ಅಲ್ಲ.
ಲಂಚಪ್ರಿಯ, ವಂಚನಾಪ್ರಿಯ
ಸಂಚುನಡೆಸುವ ನಮ್ಮ
ಆಫೀಸರ್ ನೋಡಾ

(1996-ನಾ. ಕಸ್ತೂರಿಯವರ ಶತಮಾನೋತ್ಸವ)

# ಕುಮಾರಸ್ವಾಮಿಯು ಹಾಡಿದನೆಂದರೆ!

(ಅಣಕವಾಡು)

ನಾ. ಕಸ್ತೂರಿ

ಕುಮಾರ ಸ್ವಾಮಿಯು ಹಾಡಿದನೆಂದರೆ
ಸಭೆಯಲಿ ಗುಡುಗೇ ಮೊಳಗುವುದು;
ಕೋಪವು ಕಣ್ಣಲಿ ಸಿಡಿವುದು; ಬಾಯಲಿ
ಶಾಪದ ಪದ ತುಳುಕಾಡುವುದು!
ಬರಿ ಮರುಭೂಮಿಯೆ ತೋರುವುದು
ಆತನ ಗಾನದಲಿ
ಆಗಿನ ದೊಂಬಿಯಲಿ
ಕಟುಕರ ಆರ್ಭಟ ಮೊರೆಯುವುದು!
ಕೈ ಕಲ್ಲರಸುವುದು!
ತಾಳದ ತೊಡೆ ಕೈ ಹೊಡೆತದಲಿ,
ಸರಿಗಮ ಪದನಿಸ ರಗಳೆಯಲಿ,
ನರಳುವ ರಾಗದ ಸಂಘಟ್ಟಣೆಯಲಿ,
ಸ್ವರ ವಕ್ರಧ್ವನಿ ಚೀತ್ಕಾರದಲಿ,
ಸಾಯುವ ಧಾಟಿಯಲಿ
ಬೀಳುವ 'ನಾಟಿ' ಯಲಿ
ನಸು ಸೋತಿರುವಾ ಪ್ರಾಣದಲಿ,
ತುಸು ಕೂತಿರುವಾ ಕಂಠದಲಿ,
ಕೊರೆಯುವ ಲಯಗಳ ಹೇಷಾರವದಲಿ,
ಕಿವಿ ಉರಿಯುವುದು!
ಎದೆ ಮುರಿಯುವುದು!
ಕುಸಿಯುವ ಷಡ್ಜದಿ ಪಂಚಮಗೂಡಿ

ಕೆಮ್ಮುವ ಕರ್ಕಶ ಶಬ್ದವು ಸೇರೆ
ಕಿವಿ ಒಡೆಯುವುದು!
ಕೈ ಹುಡುಕುವುದು!
ಕೇಳಿರಿ! 'ಕದನ ಕುತೂಹಲವ'!
ಒಣ ಗೀತೆಯನು
ಒಣ ರೀತಿಯಲಿ
ರೋದಿಸುವನು ನಿರ್ಭೀತಿಯಲಿ!
ಎಂಜಲನೆರಚುವ ಜಿಹ್ವೆಯಲಿ
ಶ್ಲೇಷ್ಮವು ತುಂಬಿಹುದು!
ಕತ್ತನು ಕೊಯ್ಯುತಲಿರುವನು 'ತೋಡಿ'ಯ,
ಅಯ್ಯೋ! ನೋಡಲ್ಲಿ!
ಗತಿಯಿಂದುರುಳುತಲಿರುವುದು ವರ್ಣವು,
ಹಾ! ಹಾ! ನೋಡಿಲ್ಲಿ!
ಬಲು ಕೆಟ್ಟದು, ಆ ಗಂಟಲ ಉಗುಳು
ಅನ್ನವ ತಿಂದರೆ ಹೋಗದು ಅಗಳು!
ಕೆಂಗಣ್ಣ ಬೀರುತ ನೋಡಲ್ಲಿ
ಕುಂತಿರುವನು ನಡುರಂಗದಲಿ
ಸ್ವಾಮಿಯು, ಮುಡಿಗೆದರಿ!
'ಮಾಯಾ ಮಾನವ ಗೌಳ'ದ ರಾಗದಿ
ಹಾಡುವುದೇನವನು?
ಗೌರವವೇನಿದೆ? ಸಿಡಿಲಾಗಿರುವರು
ಸಭಿಕರು ರೋಷದಲಿ
ತಾಳಕೆ ತೊಡೆಯನು
ಹೊಡೆಯುವ ಕೈಯನು
ಮೇಲೆತ್ತಿರುವನು ನೋಡಲ್ಲಿ
ಸುಮ್ಮನೆ ಇದ್ದರೆ ನಮ್ಮನು ಕೊಲ್ಲನೆ?
ಮುಂದಾಗುವುದನು ಕಾಣಲ್ಲಿ!
ಇದಾವ ನ್ಯಾಯ!

ಏನನ್ಯಾಯ?
ಗಾನದ ಖೂನಿಯ ನೋಡಲ್ಲಿ!
ಏನನು ನೋಡುವೆ? ತಡೆಯುವೆ ಏಕೆ?
ಗಾನಸುಧಾರಸ ಹಿಂಗಲೆ ಬೇಕೆ?
ಯುವಕನೆ ತುಡುಕು 'ಮುಖಾರಿ' ಯನು
ಹೊಡೆ! 'ಸಾವೇರಿ' ಯನು,
ಎಳೆ, ಎಳೆ, 'ನೀಲಾಂಬರಿ' ಯ,
ಬಾ! ಕರೆ 'ಅಠಾಣ'ವನು!
ಕುಮಾರ ಸ್ವಾಮಿಯು ಹಾಡಿದನೆಂದರೆ
ಸಭೆಯಲಿ ಗುಡುಗೇ ಮೊಳಗುವುದು;
ಕೋಪವು ಕಣ್ಣಲಿ ಸಿಡಿವುದು; ಬಾಯಲಿ
ಶಾಪದ ಪದ ತುಳುಕಾಡುವುದು!
ಕಿವಿ ಪೆಚ್ಚಾಗುವುದು!
ಕಿಡಿ ಕಿಚ್ಚಾಗುವುದು!

---

# ವೈದ್ಯರಲ್ಲಿ ರಸನಿಮಿಷಗಳು!

-ಪ್ರಕಾಶ್

''ನಂ ಮಗಳು ನೋಡೀ ಡಾಕ್ಟ್ರೆ, ಯಾವ ತರಕಾರೀನೂ ತಿನ್ನಲ್ಲ! ಬರೀ ಮಜ್ಜಿಗೆ ಅನ್ನ ಮಾತ್ರ ತಿಂತಾಳೆ!'' ತಾಯಿ ಕಂಪ್ಲೇಂಟು.
ತಂದೆ ಸೇರಿಸಿದ, ''ಅದೇ ಬೇರೆಯವರ ಮನೇಗೆ ಹೋದರೆ ಎಲ್ಲಾ ಪದಾರ್ಥಾನೂ ಕೇಳಿ ತಿಂತಾಳೆ! ನಮಗೇ ಒಂದು ಥರಾ ಆಗುತ್ತೆ!''
ನಿಂ ಮನೆ ಅಡಿಗೆ ರುಚಿ ಇಲ್ಲ ಅನ್ನಕ್ಕೆ ಡಾಕ್ಟರಿಗೆ ಭಯ!
''ಒಂದು ಸಲಹೆ ಕೊಡ್ತೀನಿ ನೋಡಿ! ನಿಂ ಮನೇಲಿ ಮಾಡಿದ ಪಲ್ಯ, ಹುಳಿ ಎಲ್ಲ ಪಕ್ಕದ ಮನೇಗೆ ರವಾನಿಸಿ, ಅಲ್ಲಿಗೆ ಇವಳನ್ನ ಆಟಕ್ಕೆ ಕಳಿಸಿ!''

★ ★ ★

ಬಲಗಾಲಿನ ಹೆಬ್ಬೆರಳು ಭಾರೀ ನೋವು ಅಂತ ಯುವಕ ಬಂದ. ಪರೀಕ್ಷೆ ಮಾಡಿದರೆ, ಹೇರ್‌ಲೈನ್ ಫ್ರಾಕ್ಚರ್! 'ಹೇಗಾಯ್ತಪ್ಪ?' ಅಂದರು ಡಾಕ್ಟರು. ಉತ್ತರ ಬಂತು. ''ನಾನು ಮೆಡಿಕಲ್ ಸ್ಟೂಡೆಂಟು! ಮೆಡಿಸನ್ ಟೆಕ್ಸ್ಟ್ ಬುಕ್ಕು ಕಾಲಿನ ಮೇಲೆ ಬಿತ್ತು!'' ಇದನ್ನೂ ಗಿನ್ನಿಸ್ ಬುಕ್ಕಲ್ಲಿ ಸೇರಿಸಬಹುದೆ?

★ ★ ★

# ರೀ, ಹಾಸ್ಯಬೇಕೇನರೀ?

**(ಅಚ್ಚ ಕನ್ನಡದ ಸ್ಯಾಂಪಲ್ ಹ್ಯಾಡುಗಳು)**

**ಎಚ್. ಗೋಪಾಲಕೃಷ್ಣ**

ಹಾಸ್ಯ ಅಂದರೆ
ಬಿದ್ದು ಬಿದ್ದು ನಗುವ
ಹಾಗಿರಬೇಕೇ.....ನರೀ

ಅಥವಾ ಮೀಸೆ
ತುದಿಯಲಿ ಬಾಯಂಚು
ಅಗಲಬೇಕೇ?....ನರೀ

ಅದೂ ಬೇಡಪ್ಪಾ
ಮನಸಿಗೆ ಒಂಚೂರು
ತಂಪೆರೀಬೇಕೇ...ನರೀ

ಬಿಲೊದಿ ಬೆಲ್ಟ್
ಹಾಸ್ಯ ಅಂದರೆ ಅದು
ಅಶ್ಲೀಲವಂತೆ....ರೀ

ಅಬೊದಿಬೆಲ್ಟ್
ಹಾಸ್ಯ ಅಂದರೆ ಅದು
ಸಭ್ಯ ಸಂಸ್ಕೃತ!

ಸುಸಂಸ್ಕೃತದ
ಹಾಸ್ಯವಾದರೆ ಅದು
ಬರೀತಲೆಗೆ

ಬಟ್ಟತಲೆಗೆ
ತಲೆ ಒಳಗಿರುವ
ಖಾಲಿಜಾಗಕ್ಕೆ

ತಾವೀಗ ಹೇಳಿ
ತಮಗೆಂಥಹ ಹಾಸ್ಯ
ಅಂಬೋದು ಇಷ್ಟ?

ಸೊಂಟದ ಅಡಿ?
ಸೊಂಟದ ಮೇಲಿನದ್ದು?
ಬತ್ತಲೆ ಮೈಮು?

ಬುರುಡೆ ಷದ
ಮಾಡೋದೇ? ಮೆದುಳಿಗೆ
ನಿರಾಳವಾದ್ದೇ?

ಕಣ್ಣು ಹಾಯ್ಸಿದ
ಕೂಡಲೇ ಆರು ಆಸ್ರೋ
ನುಂಗೋಂತಹದ್ದೇ?

ಗಹಗಹಿಸಿ
ನಕ್ಕು ಪಕ್ಕೆ ಹಿಡಿದು
ಕೊಳ್ಳೋಂತಹದ್ದೇ

...ಹೇಗಿದ್ರೂ ಸರಿ
ವೈದ್ಯರ ಹತ್ತಿರ ಹೋ
ಗಲೇ ಬೇಕಿದ್ರೆ...

ಅಪರೂಪಕ್ಕೆ
ನಗಿ, ಮುಖದ ಗಂಟು
ನೇರವಾಗಲಿ!

ಅಲ್ಲವೇ ಸಾರ್?
ಅಲ್ಲವೇ ಮೇಡಂ? ಹೇಳಿ
ಹಾಸ್ಯಬೇಡವೇ?
-ಅಲ್ಲವೇ?-

---


## ಆಧುನಿಕ ವಚನಗಳು -ಶಂಸ


ಕವಿಗಳಿಗಳಿವುಂಟು;

ಕಾವ್ಯಕ್ಕಳಿವಿಲ್ಲಾ

ಸಾಹಿತ್ಯಕ್ಕುಳಿವುಂಟು;

ಸಾಹಿತಿಗಳಿಗುಳಿವಿಲ್ಲಾ




ಕೃಪೆ - ಮ್ಯಾಡ್

# ದುಷ್ಮನ್‌ಗಳೆ?..... ಅಲ್ಲ ಸ್ನೇಹಿತರು!

ರಾಮಿ.

ಅಪರಂಜಿ ಸಂಪಾದಕರೆ.... ಅಲ್ಲ.... ರಾಶಿ ಹೇಳ್ತಿದ್ದಹಾಗೆ ನಸ್ಟಿಪರೆ... ಅಂದಹಾಗೆ ಅರ್ಧ ಶತಮಾನದ ಹಿಂದಿನ ಲಕ್ಷ್ಮಣ್ ಕಾರ್ಟೂನುಗಳನ್ನ ಹಾಕ್ತಿದೀರಲ್ಲ... ಕೊರವಂಜಿ ಕಾಲದ್ದು! ಬಲ್ಸೊಗಸು! ಬಲ್ಸೊಗಸು.

ಆದರೆ....

ಆದರೆ ಒಂದು ಚಿತ್ರ ಮಾತ್ರ ಬಂದಹಾಗಿಲ್ಲ ಮುಂದೆ ಬರುತ್ತೇನೋ ನೋಡೋಣ.

ಆ ಕಾರ್ಟೂನನಲ್ಲಿ ಇಬ್ಬರು ರೇಗಿದ ಆಸಾಮಿಗಳು ಷರ್ಟಿನ ತೋಳೇರಿಸಿ ಕೈಕೈ ಮಿಲಾಯಿಸ್ತಾ ಇದ್ದಹಾಗೆ ನೆನಪು.

ಏನ್ಸಮಾಚಾರ?

ಅವರಿಬ್ಬರೂ ವೈರಿಗಳೆ? ದುಷ್ಮನ್‌ಗಳೇ ಇರಬೇಕು ಅನ್ಸುತ್ತೆ ಅಲ್ವೆ,

ಅಲ್ಲ... ಅಲ್ಲ!

ಲಕ್ಷ್ಮಣ್ ಕಾರ್ಟೂನಿಗೆ ಕೊಟ್ಟ ಶೀರ್ಷಿಕೆ ಹೇಳುತ್ತೆ ಅವರಿಬ್ಬರೂ ಸ್ನೇಹಿತರು ಅಂತ!

ಅರ್ಧ ಶತಮಾನ ಹಿಂದಿನದು ಆದರೆ ಇವತ್ತಿಗೂ ಹ್ಯಾಗೆ ಹೊಂದಿಕೊಳ್ಳುತ್ತೆ ನೋಡ್ರಿ! ಕಚ್ಚಾಡೋದು ಬೆನ್ನಿಗೆ ಇರಿಯೋದು ಕೆಂಡ ಕಾರೋದು ಇವೆಲ್ಲ ಮಾಡೋದು ವೈರಿಗಳು ಮಾತ್ರ ಅಂದರೆ ಈ ಕಾಲದಲ್ಲಿ ಯಾರು ನಂಬ್ತಾರೆ?

ಇದನ್ನೆಲ್ಲ ಮಾಡೋವ್ರು ಸ್ನೇಹಿತರು ಸ್ವಾಮಿ, ಸ್ನೇಹಿತರು ನಿನ್ನೆ ತನಕ ಅಥವಾ ಇವತ್ತು ಬೆಳಗಿನ ತನಕ 'ಗೆಣೆಯಾ' ಅಂತ ಅಪ್ಪಿಕೋತ ಇದ್ದವರು!

ಯಶವಂತ ಚಿತ್ತಾಲರ ಶಿಕಾರಿ ನೆನಪಾಗುತ್ತೆ ಅಲ್ವೇ? ಶಿಕಾರಿಗೆ ತೊಡಗೋದಕ್ಕೆ ಶತ್ರುಗಳೇ ಆಗಬೇಕಾಗಿಲ್ಲ. ಸ್ನೇಹಿತರು ಪರಸ್ಪರ ಶಿಕಾರಿ ವರಸೆಗೆ ತೊಡಗಿದಾಗಲೇ ಇರೋದು ಮಜಾ!

ಅಂದಹಾಗೆ ದಿಲ್ಲಿಯಿಂದ ಹಳ್ಳಿ ತನಕ ಇವತ್ತಿಗೆ ನಡೀತಾ ಇರೋದು ಅದೇನೆ. ಏಣಿಸ್ಕೊಂಡರೆ ಹೊಟ್ಟೆ ತಂಪಾಗಬೇಕು ಅಲ್ವೆ?

ಇನ್ನು ದೇಶ ದೇಶಗಳೊಳಗೂ ಇದೇ ಮಾದರಿ ಗೆಣೆತನ. ನಮಗೋ ಪ್ರಪಂಚದ ಬಲುದೊಡ್ಡ ಪ್ರಜಾಪ್ರಭುತ್ವ ಅಂತ ಕೋಡು, ಅಮೇರಿಕದವರಿಗೆ ತಾವು ಡೆಮಾಕ್ರಸಿಯ ಕುಲ ಪುರೋಹಿತರು ಅಂತ ಕೋಡು. ಹೇಳೋದಕ್ಕೆ ಸಮಾನ ಧ್ಯೇಯ. ಆದರೆ ನಡಿತಿರೋದೇನು? ಮಿಲ್ಟ್ರಿ ಸರ್ವಾಧಿಕಾರಿಗಳು ನಿರಂಕುಶ ಪ್ರಭುಗಳು ಇಂಥವರೇ ಅವರಿಗೆ ಹೆಚ್ಚು ಪ್ರಿಯ ಈ ಕಡೆ ಸ್ನೇಹಿತರಿಗೆ ನೂರುತರದಲ್ಲಿ ಸತಾಯಿಸ್ತಾರೆ. ಪಿನ್ ಪ್ರಿಕ್ಕುಗಳಿಗೆ ಕೊನೆ ಮೊದಲಿಲ್ಲ ನಾವು ವೈರಿಗಳೆ? ಅಲ್ಲ ಅಲ್ಲ ಸ್ನೇಹಿತರು ಸ್ವಾಮಿ, ಸ್ನೇಹಿತರು!

ಅಂದ ಹಾಗೆ ಆ ಲಕ್ಷ್ಮಣ್ ಕಾರ್ಟೂನು ಯಾವಾಗ ಹಾಕ್ತೀರ?

# ಉಡುಪಿಯಲ್ಲೊಂದು ಹಾಸ್ಯ ಸಂಘ

ಕು.ಗೋ.

ಬುದ್ಧಿ ಜೀವಿಗಳ ಗಂಭೀರ ಚಿಂತನೆಗಳ ಮಧ್ಯೆಯೂ ನಗಬೇಕೆಂಬ, ನಗಿಸಬೇಕೆಂಬ ಬಯಕೆ ಹೊತ್ತು ಉಡುಪಿಯಲ್ಲೊಂದು ಹಾಸ್ಯ ಪ್ರಿಯರ ಸಂಘಟನೆ ಇತ್ತೀಚೆಗೆ ಉದಯವಾಯಿತು.

ಕೊರವಂಜಿ ಹಾಗೂ ಅಪರಂಜಿಯ ಹಾಸ್ಯ ಲೇಖಕ ರಾಮಿ (ಶ್ರೀ ಎ.ಎಸ್. ರಾಮಕೃಷ್ಣ) ಯವರ ಕೃಪೆಯಿಂದ 'ಸುಹಾಸ' ನಾಮಾಂಕಿತ ಸಂಘಟನೆ ಝುಡಿ ಮಳೆ ಸುರಿಯುತ್ತಿದ್ದ ಸಂತೆಯ ಸಮಯ ಉದ್ಘಾಟಿಸಲ್ಪಟ್ಟಿತು. ಜೀವನದಲ್ಲಿ ಶ್ರೀ ರಾಮನ ಗಂಭೀರತೆಯನ್ನೂ ಬರಹದಲ್ಲಿ 'ಶ್ರೀ ಕೃಷ್ಣನ ತುಂಟತನವನ್ನೂ ತೋರಿಸುತ್ತಿರುವ, ಈ ವರೆಗೆ ಎರಡು ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವ, ಏಳು ದಶಕಗಳನ್ನು ದಾಟಿರುವ ಶ್ರೀ ರಾಮಕೃಷ್ಣರು ನೆರೆದ ಹಾಸ್ಯಪ್ರಿಯರನ್ನು ನಕ್ಕು ಹಗುರಾಗಲು ಮೈಕಿನ ಮುಂದೆ ನಿಂತು ಕರೆ ಕೊಟ್ಟಾಗ ಹಾಸ್ಯ ಪ್ರಿಯರು ಅವರ ಮಾತನ್ನು ಗಂಭೀರವಾಗಿ ಕೇಳಿ, ಹಗುರವಾಗಿ ನಕ್ಕು, ಇಂದಿನ ದಿನಗಳಲ್ಲಿ ಅಪರೂಪವಾಗುತ್ತಿರುವ ನಗುವನ್ನು ಧಾರಾಳವಾಗಿ ಉಪಯೋಗಸಲು, ಹಾಸ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಈ 'ಸುಹಾಸ' ಸಹಾಯ ಮಾಡಲಿ ಎಂದು ಆಶಿಸಿದರು ಸಂಘಟಕರ ಉತ್ಸಾಹದಲ್ಲಿ ಬೆರೆತು ಆಜೀವ ಸದಸ್ಯರೂ ಆದರು.

ಯಥಾ ಪ್ರಕಾರ ಪ್ರಾರ್ಥನೆ, ಸ್ವಾಗತ, ಪ್ರಸ್ತಾವನೆ, ಸಂದೇಶ ಬರುವುದರಲ್ಲಿ ಸಂದೇಹವಿದ್ದರೂ ಸಭೆಗೆ ಬರಲಾಗದಿದ್ದವರು ಕಳಿಸಿದ್ದ ಸಂದೇಶಗಳ ವಾಚನ, ದೀಪ ಬೆಳಗಿಸಿ ಚಾಕಲೇಟ್ ಉದುರಿಸಿ ಉದ್ಘಾಟನೆ, ಉದ್ಘಾಟಕರ ಭಾಷಣ ಶ್ರೀಮತಿ ಭುವನೇಶ್ವರಿ ಹೆಗಡೆಯವರ ಭಾಷಣ ಕೇಳಲು ಹಾಸ್ಯಪ್ರಿಯರು ಕಾತುರರಾಗಿದ್ದಂತೆ ಕಂಡುಬಂತು.

ಸದ್ಯಕ್ಕೆ ಘಟ್ಟದ ಮೇಲಿನ ಸುನಂದಮ್ಮನನ್ನು ಬಿಟ್ಟರೆ ಘಟ್ಟದ ಕೆಳಗಿನ ಭುವನೇಶ್ವರಿ ಹೆಗಡೆ ಹಾಸ್ಯ ಲೋಕದಲ್ಲಿ ಮಿಂಚುವ ತಾರೆಯಾಗಿದ್ದಾರೆ, ಪಂಜೆ, ಕಟ್ಟಿ, ಪಡುಕೋಣೆ, ಬಾಗಲೋಡಿ, ಪಾಡಿಗಾರರ ಸಾಲಿನಲ್ಲಿ ನಿಲ್ಲುವ ಯೋಗ್ಯತೆಯನ್ನು ಹೊಂದಿರುವ ಈಕೆ ಕನ್ನಡ ಹಾಸ್ಯ ಲೋಕದ ದೊಡ್ಡ ಆಸ್ತಿ. ಎಲ್ಲಾ ಹಾಸ್ಯ ಸಾಹಿತಿಗಳ ಮೇಲೂ, ಎಲ್ಲಾ ಹಾಸ್ಯ ಪತ್ರಿಕೆಗಳ ಮೇಲೂ ಅಪಾರ ವಿಶ್ವಾಸ ಗೌರವ ಇರುವ ಈ ನಗೆಗಾರ್ತಿ 'ಸುಹಾಸ'ದ ಸಭೆಯಲ್ಲಿ ಹಾಜರಾಗಿ ನಗೆ ಏಕೆ ಬೇಕು, ಎಷ್ಟುಬೇಕು, ಎಲ್ಲಿಬೇಕು, ಹೇಗೆಬೇಕು, ಎಂಬುದರ ಬಗ್ಗೆ ಸೋದಾಹರಣವಾಗಿ ವಿವರಿಸಿ ನಕ್ಕು ನಗಿಸಿ 'ಮೊದಲು ನಮ್ಮನ್ನು ನೋಡಿ ನಾವು ನಗಲು ಕಲಿಯೋಣ' ಎಂದರು - ನಗೆಯ ಪರಿಮಳವನ್ನು ಬೀರಿದರು. ಇನ್ನೂ ಸ್ವಲ್ಪ ಹೊತ್ತು ಮಾತನಾಡಬೇಕೆನಿಸಿದರೂ, ಅಲ್ಲಲ್ಲಿ ನಿಂತು ರಸ್ತೆಯ ಹೊಂಡಗಳ ಕೆಸರು ನೀರನ್ನು ಚಿಮ್ಮಿಸಿ ಓಡುವ ಎಕ್ಸ್‌ಪ್ರೆಸ್ ಬಸ್ಸಿನಲ್ಲಿ ಅರವತ್ತು ಕಿಲೋ ಮೀಟರ್ ಪ್ರಯಾಣ ಮಾಡಬೇಕಿದ್ದುದರಿಂದ, ಆಗಲೇ ರಾತ್ರಿ ಎಂಟು ಘಂಟೆ ಆಗಿದ್ದುದರಿಂದ ತಮ್ಮ ಭಾಷಣಕ್ಕೆ ಬ್ರೇಕ್ ಹಾಕಲೇಬೇಕಾಯಿತು.

ಮಧ್ಯೆ ಕುಡಿಯಲು ಬಿಸಿ ಬಿಸಿ ಕಾಫಿ, ಸವಿಯಲು ಚಾಕಲೇಟ್ ಸರಬರಾಜಿನ ವ್ಯವಸ್ಥೆ ಇದ್ದುದರಿಂದ ಹಾಸ್ಯಪ್ರಿಯರು ಅಧ್ಯಕ್ಷ ಭಾಷಣ, ವಂದನಾರ್ಪಣೆಯವರೆಗೂ ಕಾದು ಕುಳಿತಿದ್ದು 'ಸುಹಾಸ'ದ ಮುಂದಿನ ಸಾಹಸ ಏನಿರಬಹುದೆಂಬುದನ್ನು ಊಹಿಸಲಾಗದೇ ಕೊಡೆ ಬಿಡಿಸುತ್ತಾ, ನಗೆ ಚೆಲ್ಲುತ್ತಾ ಹೊರಟಾಗ ಸಂಘಟಕರು ತಮ್ಮಷ್ಟಕ್ಕೆ ತಾವೇ ಅಂದುಕೊಂಡರು. ಹಾಸ್ಯಸಂಘದ ಉದಯವಾಯಿತು. ಇನ್ನು ಹೇಗಾದರೂ ಬೆಳೆದೀತು ನೋಡೋಣ ಎಂದು.

ಸಭೆಯಲ್ಲಿ ಕೊಟ್ಟ ಮಲ್ಲಿಗೆ ಹೂವಿನ ಮಾಲೆ ಭುವನೇಶ್ವರಿ ಹೆಗಡೆಯವರಿಗೆ ಬಹಳ ಇಷ್ಟವಾಯಿತಂತೆ. 'ಅಪರಂಜಿ'ಯೂ ಅವರಿಗೆ ಇಷ್ಟವಾದ್ದೇ ಅಲ್ಲವೇ?

---

# ವಿನಾಯತಿ

**ಡಾ|| ಶರಣಬಸವೇಶ್ವರ ಅಂಗಡಿ.**

ಎಂಪಿ ಜೊತೆ
ಪಯಣಿಸಿದ್ರೆ
ಸತಿ
ಉಚಿತ ರೈಲು
ಪ್ರಯಾಣದ
ರಿಯಾಯಿತಿ!
ವಾಜಪೇಯಿಯೆಂದರು
ಎನಗಿಲ್ಲವಲ್ಲ ಸತಿ
ಕರೆದೊಯ್ಯಬಹುದೇ
ಪ್ರೇಯಸಿ?
ಆಗದು
ವಿನಾಯಿತಿ
SPOUSEಗೆ ಮಾತ್ರ
SPICE ಗಲ್ಲ
ಎಂದ್ರು ಮಂತ್ರಿ

# ಕಾಫೀ ಆಯ್ತಾ?

ಎಂ.ಎನ್.ಕೆ.

ನಾವು ವಿಂಧ್ಯ ಪರ್ವತದ ಕೆಳಗಿರುವವರು. ದಾಕ್ಷಿಣಾತ್ಯರು ಕಾಫೀ ಪ್ರಿಯರು. ಬೆಳಗಾಗೆದ್ದ ಕೂಡಲೇ ನಾವು ಇದಿರುನೋಡುವುದು ಒಂದು ಕಪ್ ಬಿಸಿ ಬಿಸೀ ಸ್ಟ್ರಾಂಗ್ ಮೈಸೂರ್ ಫಿಲ್ಟರ್ ಕಾಫೀ. ನಮ್ಮ ಅಂದಿನ ಇತರೇ ಕಾರ್ಯಕ್ರಮಗಳ ಆಗು ಹೋಗು ಬೆಳಗಿನ ಆ ಒಂದು ಕಪ್ ಕಾಫೀಮೇಲೆ ನಿಂತಿದೆ.

ಈ ನಮ್ಮ ಕಾಫೀ ಅವಲಂಬನೆ ಎಷ್ಟಾಗಿದೆಯೆಂದರೆ ಮತ್ತು ಆ ಕಾಫೀ ನಮ್ಮಲ್ಲಿ ಎಷ್ಟು ರಕ್ತಗತವಾಗಿದೆಯಂದರೆ ಒಬ್ಬ ಕುಹುಕಿ ಹೇಳಿದಂತೆ ''ನಿಮಗೆ ಎಮರ್ಜೆನ್ಸಿಲೀ ನಿಮ್ಮ ಗ್ರೂಪ್ ರಕ್ತದಬದಲು ಫಿಲ್ಟರ್ ಕಾಫೀನೇ ಕೊಡಬಹುದೂಂತ.'' ನಮ್ಮ ಒಬ್ಬ ಹಿರಿಯ ಸಾಹಿತಿಗಳು ಹೇಳಿದಂತೆ ನಾವು ಕಪ್ಪಗಿರುವುದಕ್ಕೆ ಕಾರಣ ನಮ್ಮ ನಿರಂತರ ಈ ಕಾಫೀ ಸೇವನೆ.

ನಾವು ಬೆಳಗಾಗೆದ್ದು ವಾಕಿಂಗ್ ಹೋಗುವಾಗ ದಾರಿಯಲ್ಲಿ ಸಿಕ್ಕ ನನ್ನ ಸ್ನೇಹಿತರು ನನ್ನನ್ನು ವಿಚಾರಿಸುವುದು ''ಏನ್ರೀ ಆಯ್ತ ನಿಮ್ಮ ಕಾಫೀ'' ಅಂತ. ಅವರು ನನ್ನ ಬೆಳಗಿನ ಇನ್ನೂ ಅನೇಕ ಮುಖ್ಯ ಕಾರ್ಯಗಳ ಬಗ್ಗೆ ವಿಚಾರಿಸುವುದೇ ಇಲ್ಲ. ಅವರಿಗೆಲ್ಲಾ ನನಗಿರುವ ಅನೇಕ ತೊಂದರೆಗಳ ಬಗ್ಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ನಾನೆ ಅವರಿಗೆಲ್ಲಾ ಅವರಿಗೆ ಬೋರ್ ಹಿಡಿಸುವವರೆಗೆ ನನ್ನ ತೊಂದರೆಗಳನ್ನು ಅವರೊಂದಿಗೆ ''ಹಂಚಿ'' ಕೊಂಡಿದ್ದೇನೆ. ಅವರಲ್ಲೊಬ್ಬರಾದರೂ ನನ್ನ ಹತ್ತಿರಬಂದು ಪಿಸುಮಾತಿನಲ್ಲಿ ''ಏನಪ್ಪಾ, ಇವತ್ತು ಹೇಗಿತ್ತು?. ಎಲ್ಲಾ ಸರಿಯಾಗಿ ಆಯ್ತ?. ಏನೂ ತೊಂದರೆ ಇರಲಿಲ್ಲಾ ತಾನೆ'' ಎಂದು ಕೇಳಿಯಾರೆ?. ಉಹುಂ. ಇಲ್ಲವೇ ಇಲ್ಲ. ನಾನಿನ್ನೆಲ್ಲಿ ನನ್ನ ಬೊರಿಂಗ್ ಶುರು ಮಾಡುಬಿಡುತ್ತಿನೋ ಅನ್ನೋ ದಿಗಲಲ್ಲಿ ಆ ಕಡೆ ಫುಟ್ ಪಾತಿನಿಂದಲೇ ''ಕಾಫೀ ಆಯ್ತ'' ಅಂತ ಕೇಳಿ ಉತ್ತರಕ್ಕೂ ಕಾಯದೆ ದೌಡಾಯಿಸುತ್ತಾರೆ. ನನ್ನ ಅದೃಷ್ಟ. ಅವರು ಆ ಕಡೆ ಫುಟ್ ಪಾತಿನಿಂದಲೇ ನನ್ನ ತೊಂದರೆ ಬಗ್ಗೆ ಪಬ್ಲಿಕಾಗಿ ತಮ್ಮ ಕಂಚಿನ ಕಂಠದಿಂದ ಕೇಳಲಿಲ್ಲವಲ್ಲ. ಅದೇ ನನ್ನ ಪುಣ್ಯ.

ನಾನು ಹಾಗೇ ನನ್ನ ವಾಕಿಂಗ್ ಮುಂದುವರಿಸುವಾಗ ಇನ್ನೊಂದು ದೃಶ್ಯ ಕಾಣುತ್ತೆ. ಒಬ್ಬ ಗೃಹಿಣಿ ರಸ್ತೆ ಮಧ್ಯೆ ನಿಂತು ಹಾಲಿನವನಿಗಾಗಿ ಇದಿರುನೋಡುತ್ತಿರುತ್ತಾಳೆ. ಶಬರಿ ಶ್ರೀ ರಾಮನಿಗಾಗಿ ಇದಿರುನೋಡಿದಂತೆ. ಪಕ್ಕದ ಮನೆಯಾಕಿ ತನ್ನ ಕಾಫೀ ಗೀಫೀ ಮುಗಿಸಿ ಆಚೆಗೆ ಬಂದು ಈಕೆಯನ್ನು ಉದ್ದೇಶಿಸಿ ''ಏನ್ರೀ ನಿಮ್ಮನೇಲಿ ಎಲ್ಲಾದರ್ೂ ಕಾಫೀ ಆಯ್ತ?'' ಎಂದು ವಿಚಾರಿಸಿದಾಗ ಈಕೆ ತನ್ನ ಕೈ ಚೆಲ್ಲುತ್ತ ರಸ್ತೆಯಿಂದ ತನ್ನ ಕಣ್ಣು ಕೀಳದೇ ''ಅಯ್ಯೋ ಎಲ್ರಿ ಬಂತ್ರೀ. ಈ ಹಾಲಿನೋನು ಇವತ್ತೂ ಕೈ ಕೊಟ್ಟ. ಇವರಿಗೆ ಆಫೀಸಿಗೆ ಹೊತ್ತಾಯ್ತು. ಹುಡುಗರಿಗೆ ಸ್ಕೂಲಿಗೆ ಟೈಂ ಆಗ್ತಾ ಇದೆ. ನನಗೋ ಬೆಳಿನಿಂದ ಗಂಟಲು ಒಣಗ್ತಾ ಇದೆ. ಇವತ್ತು ನಮಗಾರಿಗೂ ಕಾಫೀ ಇಲ್ಲಾಂತ ಕಾಣುತ್ತೆ. ದೇವರೇ ಗತಿ'' ಅಂದಾಗ ನನಗೆ ಬಹಳ ಮುಜುಗರವಾಗುತ್ತೆ. ಇನ್ನು ಮುಂದೆ ವಾಕಿಂಗ್

ಹೋಗುವಾಗ ನಾನೇಕೆ ಅರ್ಧ ಲೀಟರ್ ಹಾಲಿನ ಪಾಕೆಟ್ ಕೈಲಿ ಹಿಡಿದುಕೊಂಡು ಹೋಗಬಾರ್ದೂ ಅಂತಾನೂ ಅನ್ಸುತ್ತೆ. ಆದರೆ ನನ್ನ ಮನೆಯಾಕೆಯ ಕಣ್ಣು ತಪ್ಪಿಸಿ ಹಾಲಿನ ಪಾಕೆಟ್ ತಗೊಂಡು ಹೋಗೋದು ಸಾಧ್ಯವಾ?. ಅವಳೇನಾದ್ರು ಇದನ್ನು ನೋಡಿ ''ಏನ್ರೀ ಹಾಲಿನ ಪಾಕೆಟ್ ಎಲ್ಲಿಗ್ರೀ ತೊಗೊಂಡು ಹೋಗ್ತಾ ಇದೀರಾಂತ'' ಕೇಳಿದರೆ ನಾನೇನು ಸಮಜಾಯಿಸಿ ಕೊಡ್ಲೀ?. ಹೋಗಲಿ ಬಿಡಿ. ಇಲ್ಲದ ಉಸಾಬರಿ ನನಗ್ಯಾಕೆ?.

ವಿಂಧ್ಯ ಪರ್ವತದ ಉತ್ತರಕ್ಕೆ ಇರುವುದು ಪುಣ್ಯ ಭೂಮಿ. ಅಲ್ಲಿ ಕಾಫೀ ಸೇವನೆ ತುಂಬಾ ಕಮ್ಮಿ. ಅದು ಟೀ ದೇಶ. ಈಗ ನಮ್ಮ ಗೌಡರು ಪ್ರಧಾನಿಗಳಾದಮೇಲೆ ಅಲ್ಲಿ ಟೀಗೆ ಬದಲು ಕಾಫೀ ಬರುತ್ತೆ ಅನ್ನುವಹಾಗೂ ಇಲ್ಲ. ಏಕೆಂದರೆ ನಮ್ಮ ಗೌಡರು ಕಾಫೀ ಟೀ ಏನನ್ನೂ ಕುಡಿಯುವುದಿಲ್ಲವಂತೆ. ಅವರ ಪಾನೀಯ ಕೇವಲ ಹಸುವಿನ ಹಾಲು. ಈ ಪುಣ್ಯ ಭೂಮಿಯಲ್ಲಿ ಟೀ ಜೊತೆ ಜಿಲೇಬೀಯನ್ನೂ ಸೇವಿಸುತ್ತಾರಂತೆ. ಆದರೆ ನಮ್ಮ ಕಾಫೀಗೂ ಈ ಸಿಹಿತಿಂಡೀಗೂ ಎಣ್ಣೆ-ಸೀಗೇಕಾಯಿ. ಸಿಹಿ ತಿಂದ ನಾಲಿಗೆಗೆ ಕಾಫೀ ಏನೇನೂ ರುಚಿಸುವುದಿಲ್ಲ. ಮಧ್ಯೆ ಒಂದು ಖಾರಾ ಬೇಕೇ ಬೇಕು. ಅದಕ್ಕೇ ಹಿಂದಿನ ಕಾಲದಲ್ಲಿ ಹೋಟೆಲುಗಳಲ್ಲಿ ''ಸಿಹಿ ತಿಂದಮೇಲೆ ಬಿಟ್ಟೀ ಖಾರಾ ಕೊಡುವುದಿಲ್ಲಾಂತ'' ಬೋರ್ಡ್ ಹಾಕಿರುತ್ತಿದ್ದರು. ಆದರೆ ಆ ತರಹ ಬೋರ್ಡ್‌ಗಳು ಈಗಿನ ಫಾಸ್ಟ್‌ಫುಡ್ ಜಾಯಿಂಟ್ಗಳಲ್ಲಿ ಕಾಣುವುದಿಲ್ಲ. ಏಕೆಂದರೆ ಈ ಜಾಯಿಂಟ್‌ಗಳಲ್ಲಿ ತಿಂಡಿ ತಿನ್ನುವುದಕ್ಕೆ ಮುಂಚೆ ದುಡ್ಡುತೆತ್ತು ಕೂಪನ್ ಕೊಳ್ಳಬೇಕು. ಅಲ್ಲಿ ಬಿಟ್ಟೀ ಖಾರಾ ಕೇಳುವುದಕ್ಕೆ ಸಾಧ್ಯವೇ ಇಲ್ಲ.

ಬಹಳ ವರುಷಗಳ ಹಿಂದಿನ ಮಾತು. ನನಗೆ ಪರಿಚಯವಿದ್ದ ಕೆಲವು ಹಿರಿಯರಿದ್ದರು. ಅವರಲ್ಲೊಬ್ಬರು ಸೆಖೆಯಾಗಲೀ ಛಳಿಯಾಗಲೀ ತಮ್ಮ ಕ್ಲೋಸ್ ಕಾಲರ್ ಕೋಟ್ ಬಿಟ್ಟಿರುತ್ತಿರಲಿಲ್ಲ. ಅದರ ಒಂದು ಕಿಸೆಯಲ್ಲಿ ಸದಾಕಾಲ ಪೇಪರ್‌ನಲ್ಲಿ ಸುತ್ತಿಟ್ಟಿರುವ ಅಯ್ಯಂಗಾರ್ ಅಂಗಡಿ ಬ್ರೆಡ್ ಇಟ್ಟಿರುತ್ತಿದ್ದರು. ಇದಾಕೆ ಎಂದು ಕೇಳಿದರೆ ಅವರ ಸಮಜಾಯಿಸಿ ಹೀಗಿರುತ್ತಿತ್ತು ''ನೋಡಪ್ಪಾ ನಾನು ಯಾರದಾದರೂ ಮನೇಗೆ ಹೋದಾಗ ಅವರು ಕಾಫೀ ಕೊಟ್ಟೇ ಕೊಡುತ್ತಾರೆ. ಆಗ ಈ ಬ್ರೆಡ್ಡನ್ನ ಆ ಕಾಫೀಲಿ ಅದ್ದಿಕೊಂಡು ತಿನ್ನೊಕ್ಕಾಗುತ್ತೆ.'' ಆ ಮಹಾಶಯರು ಹಾಗೆ ಅದ್ದಿಕೊಂಡು ತಿಂದು ಉಳಿದ ಬ್ರೆಡ್ ಅನ್ನು ಅದೇ ಕಾಗದದಲ್ಲಿ ಸುತ್ತಿ ತಮ್ಮ ಕಿಸೆಯೊಳಗೆ ಮತ್ತೆ ತುರುಕುತ್ತಿದ್ದರು. ಇದರಿಂದ ಈ ಅತಿಥಿಗಾಗಲಿ ಅವರ ಅಭ್ಯಾಗತರಿಗಾಗಲೀ ಯಾವ ರೀತಿಯ ಸಂಕೋಚವೂ ಇರುತ್ತಿರಲಿಲ್ಲ. ಈಗಿನ ಟೇಬಲ್ ಮ್ಯಾನರ್ಸ್-ಗೀನರ್ಸ್ ಸಭ್ಯತೆ- ಅಸಭ್ಯತೆ ಇದಾವುದೂ ಆಗ ಅಡ್ಡಿ ಬರುತ್ತಿರಲಿಲ್ಲ.

ಇನ್ನೊಬ್ಬ ಹಿರಿಯರು ತಮಗೆ ಕೊಟ್ಟ ಚಕ್ಕುಲಿ, ಕೋಡುಬಳೆಗಳನ್ನು ಕಾಫೀ ಲೋಟಕ್ಕೆ ಹಾಕಿ ಚೆನ್ನಾಗಿ ನೆನೆಯಿಸಿ ತಿನ್ನುತ್ತಿದ್ದರು. ನಾನು ಇದನ್ನು ನೋಡಿ ನಕ್ಕಾಗ ಅವರು ''ನೋಡಯ್ಯ ಇದರ ಮಜ ನಿನಗೇನುಗೊತ್ತು. ಒಂದುಸಲ ನೀನೂ ತಿಂದು ನೋಡು ಆಗ ಗೊತ್ತಾಗುತ್ತೆ'' ಎಂದು ಸವಾಲ್ ಹಾಕಿದರು. ಈ ರೀತಿ ಬ್ರೆಡ್ ಮತ್ತು ಚಕ್ಕುಲಿಗಳನ್ನು ಟೀ ಅಲ್ಲೂ ಅದ್ದಿ ತಿನ್ನಬಹುದೇ ಇಲ್ಲವೇ ನನಗೆ ಗೊತ್ತಿಲ್ಲ.

ನಮ್ಮ ಫ್ಯಾಕ್ಟರೀಗಳಲ್ಲಿ ಕರಾರುವಕ್ಕಾಗಿ ಸರಿಯಾದ ಟೈಂಗೇ ಕಾಫೀ ಸಮಾರಾಧನೇ ಆಗಲೇಬೇಕು. ಈ ವಿತರಣೆಯಲ್ಲಿ ಏನಾದರೂ ಕಿರಿಕ್-ಗಿರಿಕ್ ಆದರೆ ಅಂದಿನ ಉತ್ಪಾದನೆ ಸೊನ್ನೆ. ಇದನ್ನ ಸರಿಪಡಿಸಲು ಮತ್ತೊಂದು ಸಲ ಸ್ಟ್ರಾಂಗ್ ಕಾಫೀ ಸರಬರಾಜಿಂದಲೇ ವಿನಹ ಬೇರಾವುದರಿಂದಲೂ ಸಾಧ್ಯವಿಲ್ಲ.

ಅನೇಕಾನೇಕ ತಿಳಿದವರು, ಅಷ್ಟೇನೂ ಗೊತ್ತಿಲ್ಲದವರೂ, ಆಯುರ್ವೇದಿಗಳು, ಆಲೊಪತಿಗಳು, ಹೋಮಿಯೋಪತಿಗಳು ಎಲ್ಲರೂ ಒಟ್ಟಾರೆ ನಮ್ಮ ಕಾಫಿಯನ್ನು ಖಂಡಿಸಿದ್ದಾರೆ. ಕಾಫಿ ಆರೋಗ್ಯಕ್ಕೆ ಹಾನಿ ಅಂತ ಹೇಳಿದ್ದಾರೆ. ಆದರೂ ದಿನಕ್ಕೆ ಮೂರು ಸಲ ಒಂದು ದೊಡ್ಡ ಬೆಳ್ಳಿ ಬಟ್ಟಲ ತುಂಬಾ ಕಾಫೀ ಹೀರಿ ಬಹುಕಾಲ ಆರೋಗ್ಯವಂತರಾಗಿ ಬಾಳಿದ ಮತ್ತು ಬಾಳುತ್ತಿರುವ ಮಹನೀಯರ ವಿಚಾರ ಈ ಕಾಫೀ ನಿಂದಕರು ಮಾತೇ ಆಡುವುದಿಲ್ಲ.


ಸುಮಾರು ನಲವತ್ತರ ದಶಕವನ್ನು ''ರೇಷನ್ ಕಾಲ'' ಎನ್ನಬಹುದು. ಆಗ ಎಲ್ಲಾದಕ್ಕೂ ರೇಶನ್ ಇತ್ತು. ಅಕ್ಕಿ, ರಾಗಿ, ಸಕ್ಕರೆ, ಪಂಚೆ, ಸೀರೆ, ಸೌದೆ, ಅಯ್ಯಂಗಾರ್ ಬೇಕರಿ ಬ್ರೆಡ್, ಕಾಫೀ ಬೀಜ ಎಲ್ಲಾದಕ್ಕೂ ರೇಶನ್ ಕಾರ್ಡ್ ಮೂಲಕವೇ ವಿತರಣೆ ಇತ್ತು. ಆಗ ಕಾಫೀ ಸಿಗದ ನಿರಾಶೆಗೆ ಒಬ್ಬ ಹಿರಿಯರು ಕಾಫಿ ವಿರುದ್ಧದ ಒಂದು ಹಾಡನ್ನು ಕಟ್ಟಿದ್ದರು. ಅದರ ಮೊದಲ ಎರಡು ಸಾಲುಗಳು ಹೀಗಿದ್ದವು:

''ಕಾಫೀ ಬಿಡೋ ಮನುಜ,
ನೀನು ಈ ರೇಶನ್ ಕಾಲದಲ್ಲಿ
ಕಾಫೀ ಬಿಡೋ ಮನುಜಾ''


ಈ ಹಾಡನ್ನು ಆ ಮಹನೀಯರು ತಮ್ಮ ಗುರುತಿರುವವರ ಮನೆಗಳಲ್ಲಿ ಆ ಮನೆಯವರು ಕೊಟ್ಟ ಕಾಫಿಯನ್ನು ಹೀರುತ್ತಾ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ನಮ್ಮ ದಾಸೋತ್ತಮರು ತಮ್ಮ ದೇವರ ನಾಮದಲ್ಲಿ ''ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಬಟ್ಟೆಗಾಗಿ....'' ಅಂದಿದ್ದಾರೇ ವಿನಹ ಅವರು ''ಒಂದು ಕಪ್ ಕಾಫೀಗಾಗಿ'' ಅಂತ ಸೇರಿಸಿಲ್ಲ ನಿಜ. ಆದರೆ ಈ ಕಾಲದಲ್ಲಿ ಕಾಫಿ ಸಿಗುತ್ತಿರಲಿಲ್ಲ. ಬಾಬಬುಡನ್ ಇನ್ನೂ ನಮ್ಮ ಚಿಕ್ಕಮಗಳೂರಿಗೆ ಬಂದಿರಲಿಲ್ಲ. ಹಾಗೇನಾದರೂ ನಮ್ಮ ದಾಸೋತ್ತಮರ ಕಾಲದಲ್ಲಿ ಕಾಫೀ ಸಿಗುವಂತಿದ್ದರೆ ಅವರು ಖಂಡಿತವಾಗಿ ''ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಬಟ್ಟೆಗಾಗಿ, ಒಂದು ಲೋಟ ಬಿಸಿ ಬಿಸೀ ಕಾಫೀಗಾಗಿಂತ'' ಸೇರಿಸುತ್ತಿದ್ದರು. ಇದು ಖಂಡಿತ.

ಹಾಗೇನೇ ಈ ಕಾಫೀ ನಮ್ಮ ವೇದ ಕಾಲದಲ್ಲಿ ಪರಿಚಯವಿದ್ದಿದ್ದರೆ ಅದನ್ನು ದೇವರ ನೈವೇದ್ಯ, ತೀರ್ಥ-ಪ್ರಸಾದಗಳಿಗೂ ನೇಮಿಸುತ್ತಿದ್ದರು. ಇದೂ ಖಂಡಿತ.



ನಾ...ನಿರುವುದೇ ನಿನಗಾಗೀ



''ಆದರ ಹತ್ರ ಹೋಗ್ಬೇಡ ಕಣೋ,  ನೆನ್ನೆ ನಮ್ತಂದೆನ ಕಚ್ಚಿಟ್ಟಂತೆ! ಅವರು ಹೇಳ್ತಾ ಇದ್ರು''

# ಯಾರಿಗೋಸ್ಕರ

**-ನಂದಿನಿ ಕಾಪಡಿ.**

ನನ್ನ ಜಂಬದ ಗೆಳತಿ ಜಮುನಾ ಮೊನ್ನೆ ಜಯನಗರದ ಶಾಪಿಂಗ್ ಸೆಂಟರಿನ ಹತ್ತಿರ ಕಾಣಿಸಿದಳು. ಸರ ಸರನೇ ಅಂಗಡಿಗಳ ಒಳಗೂ ಹೊರಗೂ ಹೋಗಿ ಏನೋ ಬಹಳ ಮುಖ್ಯ ಖರೀದಿ ಮಾಡುತ್ತಿದ್ದಳು.

ನಾನು ಅವಳ ಹಿಂದೆಯೇ ಓಡಿ, ಬೆನ್ನಿನ ಮೇಲೆ ಗುದ್ದಿ 'ಏನೇ ಜಮುನಾ, ಇಷ್ಟೊಂದು ಓಡಾಟ' ಎಂದು ಕೇಳಿದೆ.

''ಸಾರಿ ಕಣೆ ನಿನ್ನ ಹತ್ರ ಮಾತನಾಡುವುದಕ್ಕೂ ಪುರುಸತ್ತಿಲ್ಲ. ಒಂದು ಕೆಲಸ ಮಾಡು ನಿಂಗಂತೂ ಏನೂ ಕೆಲಸವಿದ್ದ ಹಾಗಿಲ್ಲ. ನನ್ನ ಜೊತೆ ನಾನು ಹೋದ ಕಡೆಯೆಲ್ಲಾ ಬಂದುಬಿಡು ''ಜೊತೆ ಇದ್ದಂತೆ ಆಯ್ತು, ಮಾತನಾಡಿದ ಹಾಗೂ ಆಯ್ತು'' ಎಂದಳು.

ನನಗೋ ವಿಪರೀತ ಕುತೂಹಲ ಪ್ರೈಮರಿ ಸ್ಕೂಲಿನಿಂದ ಒಟ್ಟಿಗೇ ಇದ್ದವರು ನಾವು. ನಾನೋ ಅದೂ ಇದೂ ಅಂತ ಓದಿ. ಇದ್ದ ವೇಳೆಯನ್ನೆಲ್ಲಾ ಓದುತ್ತಲೇ ಹಾಳುಮಾಡಿವೆ, ಕಡೆಗೆ ಮಾಮೂಲಿ ನೌಕರಿಗೆ ಸೇರಿಕೊಂಡು ತಿಂಗಳ ಸಂಬಳ ಎಣಿಸುವವಳು. ಜಮುನಾ ಓದುತ್ತಲೂ ಇರಲಿಲ್ಲ, ಟೀಚರಿನ ಮಾತು ಕೇಳುತ್ತಲೂ ಇರಲಿಲ್ಲ. ಒಂದೊಂದು ಸಲ ಕ್ಲಾಸಿಗೆ ಚಕ್ಕರ್ ಹಾಕಿ ಧರ್ಮೇಂದ್ರ ಹೇಮಮಾಲಿನಿ ಸಿನಿಮಾ ಕೂಡ ನೋಡಿದ್ದವಳು! ನಾವೆಲ್ಲಾ ಕಲರ್ ಪೆನ್ಸಿಲ್ ಡಬ್ಬ ಹಿಡಿದು ಡ್ರಾಯಿಂಗ್ ಮಾಡುವ ಕಾಲದಲ್ಲಿ ಇವಳೋ ತನ್ನ ಚಿಕ್ಕಮ್ಮನ ಪರ್ಸಿನಿಂದ ಲಿಪ್‌ಸ್ಟಿಕ್ ಕದ್ದು ಸ್ಕೂಲಿಗೆ ತಂದು ನಮ್ಮೆಲ್ಲರ ಮುಂದೆ ಹಚ್ಚಿಕೊಂಡು ಮೆರೆದಾಡಿದ್ದವಳು. ಟೀಚರ್ ಬೈದ್ರು ಅಂದಾಗ ''ನಿಮ್ಮೆಲ್ಲರಿಗಿಂತ ದೊಡ್ಡವಳಾಗ್ತೀನಿ ನೋಡಿ'' ಎಂದು ಹೆದರಿಸಿದ್ದಳು ಬೇರೆ!

ಜಮುನಾ ತನ್ನ ಟಾಟಾ ಎಸ್ಟೇಟ್ ಗಾಡಿಯಲ್ಲಿ ನನ್ನನ್ನೂ ಹತ್ತಿಸಿಕೊಂಡಳು. ಗಾಡಿಯ ಮೊದಲ ನಿಲ್ಲುವಿಕೆ ಪೇಟೆಯಲ್ಲಿ! ಅಂತಿಂತಹ ಪೇಟೆಯಲ್ಲ ದಿನಸಿ ಪೇಟೆಯಲ್ಲಿ! ಚಕಚಕನೇ ಇಳಿದು ಜಮುನಾ ದುಂಡಪ್ಪ ಶೆಟ್ಟಿಯವರ ಅಂಗಡಿಗೆ ಹೋಗಿ ನೂರು ಕೆ. ಜಿ. ರಾಗಿ ಖರೀದಿಸಿದಳು. ಜೊತೆಗೆ ನೂರು ಕೆ.ಜಿ. ಅವರೆ ಕಾಳು, ಐವತ್ತು ಕೆ.ಜಿ. ಕೆಂಪುಮೆಣಸಿನಕಾಯಿ ಕೂಡಾ!

ಅಲ್ಲಿಂದ ಮುಂದಿನ ಖರೀದಿ ಗೋಧಿ ನುಚ್ಚು, ಕರೀಬೀಲ್ಯ, ಕೊಬ್ಬರಿ!

ಗಾಡಿ ಮುಂದೆ ಹೋಗಿ ರೇಷ್ಮೆ ಸೀರೆಯ ಅಂಗಡಿ ಮುಂದೆ ನಿಂತಿತು. ಜಮುನಾ ಠೀವಿಯಿಂದ ಒಂದಿನ್ನೂರು ಮೊಣಕಾಲ್ಮೂರು ಸೀರೆಗಳು, ಒಂದು ನೂರು ಮೈಸೂರು

ಸಿಲ್ಕು ಇಲಕಲ್ ಸೀರೆಗಳು, ಖಣದ ರವಿಕೆಗಳು ಎಲ್ಲವನ್ನು ತೆಗೆದುಬಿಟ್ಟಳು. ಪ್ರತಿ ಅಂಗಡಿಯಲ್ಲೂ ಅವಳ ಅಮೆರಿಕನ್ ಎಕ್ಸ್‌ಪ್ರೆಸ್ ಕ್ರೆಡಿಟ್ ಕಾರ್ಡು ಹೊರಬರುತ್ತಿತ್ತು!

ಖರೀದಿ ಮುಂದಿನದು ತರಕಾರೀ ಮಾರ್ಕೆಟ್ಟಿನಲ್ಲಿ. ದೊಡ್ಡ ಸಗಟು ವ್ಯಾಪಾರಿಯ ಹತ್ತಿರ ಹೋಗಿ ಪ್ರತಿದಿನ ಕರ್ನಾಟಕ ಎಕ್ಸ್‌ಪ್ರೆಸ್ ಮೂಲಕ ಕಳುಹಿಸಬೇಕಾದ ವಸ್ತುಗಳ ಪಟ್ಟಿ ಕೊಟ್ಟಳು! ಬೂದಗುಂಬಳಕಾಯಿಗಳು, ಮೈಸೂರಿನ ಮೊಗರು ಬದನೆಕಾಯಿ, ಎಳೇ ಸೌತೆಕಾಯಿ ಇತ್ಯಾದಿ ಇತ್ಯಾದಿ.

ಅಲ್ಲಿಂದ ಮುಂದೆ ಬಂದು ಬಾಳೆ ಎಲೆ, ವೀಳ್ಯದೆಲೆ, ಅಡಿಕೆ, ಮೈಸೂರಿನ ಹುರಳೀ ಹಪ್ಪಳ. ಹುರಿಗಾಳು, ಅರಳು ಸಂಡಿಗೆ ಇತ್ಯಾದಿ ಇತ್ಯಾದಿಯನ್ನು ಬರೆಸಿ ಪ್ರತಿ ವಾರ ಕರ್ನಾಟಕ ಎಕ್ಸ್‌ಪ್ರೆಸ್ಸಿನಲ್ಲಿ ಕಳುಹಿಸುವ ವ್ಯವಸ್ಥೆ ಮಾಡಿಬಿಟ್ಟಳು.


ನನ್ನ ಕುತೂಹಲಕ್ಕೆ ಎಣೆಯೆ ಇಲ್ಲದೆ ''ಜಮುನಾ, ನಿನ್ನ ಮಗಳ ಮದುವೆಗೆ ಇನ್ನೂ ಹತ್ತು ವರ್ಷಗಳಾದರೂ ಇವೆ. ಇಷ್ಟೆಲ್ಲಾ ಖರೀದಿ ಈಗ ಯಾಕೆ? ಅಂದಹಾಗೆ ಈ ಖರೀದಿಗೂ ಕರ್ನಾಟಕ ಎಕ್ಸ್‌ಪ್ರೆಸ್ಸಿಗೂ ಸಂಬಂಧವೇನೆ'' ಎಂದು ನನ್ನ ಪೆದ್ದತನ ತೋರಿಸಿಯೇಬಿಟ್ಟೆ.


''ಅತೀ ಓದಿ ತಲೆ ಹಾಳು ಮಾಡಿಕೊಳ್ಳುವ ನಿಮ್ಮಂತವರ ಬಾಬ್ತೇ ಇಷ್ಟು. ಚೂರು ವ್ಯವಹಾರ ಜ್ಞಾನವಿಲ್ಲ'' ಎಂದು ಮುನ್ನುಡಿ ಹೇಳಿದಳು.

''ನಮ್ಮೆಜಮಾನರು ತಮ್ಮ ಆಫೀಸನ್ನು ನವದೆಹಲಿಗೆ ವರ್ಗಾಯಿಸಿಬಿಟ್ಟರುಕಣೆ. ಅಲ್ಲಿ ರಾಗಿರೊಟ್ಟಿ, ಅವರೆಕಾಳು, ಬೆಲ್ಲದ ಹೋಳಿಗೆ, ಕಜ್ಜಾಯದ ಫಾಸ್ಟ್‌ಫುಡ್ ಸೆಂಟರ್, ತೆಗೆಯುತ್ತಿದ್ದಾರೆ! ನಾನು ''ಮಿಟ್ಟೀ ಕಾರಂಗ್'' ಎಂಬ ಹೆಸರಿನ ಬೊಟಿಕ್ ತೆಗೆಯುತ್ತಿದ್ದೇನೆ. ಅಲ್ಲಿ ಬರೀ ನಮ್ಮ ಕರ್ನಾಟಕದ ವಸ್ತುಗಳೇ ಮಾರಾಟವಾಗುವುದು'' ಎಂದಳು.!

ಗಾಡಿ ಈಗ ಬಂದಿಳಿದದ್ದು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಮುಂದೆ. ಇಷ್ಟು ಹೊತ್ತಿಗೆ ನನ್ನ ಪೆದ್ದು ತಲೆಯಲ್ಲೂ ಪ್ರಕಾಶ ಹೊಳೆದು ಜಮುನಾ ಇಷ್ಟೊಂದು ಹಿಂದೀ ಪುಸ್ತಕಗಳನ್ನು ಯಾರಿಗೋಸ್ಕರ ತೆಗೆಯುತ್ತಿದ್ದಾಳೆ ಎಂದು ಗೊತ್ತಾಗಿಬಿಟ್ಟಿತು.

---





# ನಾನೂ ಅರ್ಹನೆ....

- ಆನಂದ

ಮೊನ್ನೆ ನನ್ನ ಹೆಂಡತಿ ನನಗೆ ಪ್ರಶ್ನೆಗಳನ್ನೇ ಹಾಕತೊಡಗಿದಳು.

'ಏನೂಂದ್ರೇ ನೀವು ಹಸು ಮೇಯಿಸಿದೀರಾ?' ಇದು ಮೊದಲ ಪ್ರಶ್ನೆ.

'ಖಂಡಿತ. ಶಾಲೆಯಲ್ಲಿದ್ದಾಗ ನಮ್ಮನೇಲಿದ್ದ ಗೌರೀನ ಮೇಯಿಸಿದ ಅನುಭವ ಇದೆ' ಎಂದು ಹೆಮ್ಮೆಯಿಂದ ಹೇಳಿಕೊಂಡೆ.

'ಹೌದೆ. ಸಗಣೀನ ಬಾಚಿದೀರಾ?'

'ಅಫ್‌ಕೋರ್ಸ್ ನಮ್ಮಮ್ಮ ಅಡಿಗೆ ಮನೆ ಒಲೇ ಸಾರಿಸೋಕೆ ನಾನೇ ಸಗಣಿ ತಂದ್ಕೊಟ್ಟಿದ್ದೀನಿ.'

'ವೆರಿಗುಡ್'

'ಅಂದಹಾಗೆ ನಿಮ್ಮ ವಿದ್ಯಾರ್ಹತೆ ಏನು?' ಎಂದು ಕೇಳಿದಾಗ ನಾನು ತಬ್ಬಿಬ್ಬು. ಏಕೆಂದರೆ, ಮದುವೆಯಾಗುವಾಗ ವಿಚಾರಿಸಲಿಲ್ಲವೆ? ನನ್ನ ಸಂದೇಹ ಗಮನಿಸಿ ಅವಳು 'ಮರೆತಿದೀನ್ರೀ.... ಅದಕ್ಕೆ....' ಎಂದಳು.

'ಹೌದಾ. ಗ್ರಾಜುಯೇಟ್ ಇನ್ ಸೈನ್ಸ್. ನರಸಿಂಹಯ್ಯನವರ ಶಿಷ್ಯ' ಎಂದೆ.

'ಡಿಪ್ಲೋಮಾಗಿಂತ ಹೆಚ್ಚೋ ಕಡಿಮೆಯೋ?' ಎಂದು ಕೇಳಿದಳು.

'ಹೇಗೆ ಅಳೆಯುವುದು? ಅದು ಎಸ್.ಎಸ್.ಎಲ್.ಸಿ. ಆದಮೇಲೆ ಮೂರು ವರ್ಷ. ಡಿಗ್ರೀ ಆದರೆ ಐದು ವರ್ಷ. ಅಟೆಂಡ್‌ನ್ಸ್ ಆಧಾರದ ಮೇಲೆ ಡಿಗ್ರೀನೇ ದೊಡ್ಡದು' ಎಂದು ವ್ಯಾಖ್ಯಾನಿಸಿದೆ.

'ಗುಡ್. ಹಸು ಮೇಯಿಸೋದಿಕ್ಕೆ ಬರುತ್ತೆ. ಸಗಣಿ ಬಾಚಿದೀರ. ಡಿಪ್ಲೋಮಾಗಿಂತ ಹೆಚ್ಚು ಓದಿದೀರಾ....' ಎಂದು ವಿನೋದ್ ದುವಾ! ಪ್ರಣೆಯ್ ರಾಯ್ ತರಹ ಕ್ವಿಕ್ ರಿಕ್ಯಾಪ್ ಮಾಡತೊಡಗಿದಳು.

'ಅಂದಹಾಗೆ ನೀವು ವೆಜಿಟೇರಿಯನ್, ಅದು ನನಗೂ ಗೊತ್ತು. ಆದರೆ ರಾಗಿ ಮುದ್ದೆ ತಿಂತೀರಾ?' ಎಂದು ಕೇಳಿದಳು.

'ಓಹೋ ಬಿಸಿ ಬಿಸಿ ರಾಗಿ ಮುದ್ದೆ ನನಗೂ ತುಂಬಾ ಇಷ್ಟ' ಎಂದು ಒಪ್ಪಿದೆ.

'ವೆರಿಗುಡ್, ವೆರಿಗುಡ್. ಕನ್ನಡದಲ್ಲಿ ಭಾಷಣ ಮಾಡ್ತೀರಾ ಅಲ್ವಾ?'

'ಐ ಕೆನ್ ಮ್ಯಾನೇಜ್' ಎಂದೆ.

'ಕರ್ನಾಟಕದ ಗಡಿ ದಾಟಿ ಸೇವೆಗೆ ಸಿದ್ಧ ಅಲ್ಲವೆ?'

'ಕನ್ನಡ ಪತ್ರಿಕೋದ್ಯಮದಲ್ಲಿದ್ದಮೇಲೆ ಕರ್ನಾಟಕದಾಚೆ ಹೋಗಿ ಹೇಗೆ ಸೇವೆ

ಸಲ್ಲಿಸುವುದು?' ಎಂದು ಮರು ಪ್ರಶ್ನೆ ಹಾಕಿದೆ.

'ಮಸಲಾ ಒಂದು ಅವಕಾಶ ಸಿಕ್ಕಿತೂ ಎನ್ನಿ....'

'ಅವಕಾಶ ಒದಗಿ ಬಂದಾಗ ನೋಡೋಣ' ಎಂದು ಮಾತು ಹಾರಿಸಿದೆ.

'ಅಂದಹಾಗೆ ಹಿಂದಿ ಬರುತ್ತೇನು ನಿಮಗೆ?'

'ಪರವಾಗಿಲ್ಲ ಮ್ಯಾನೇಜ್ ಮಾಡಬಲ್ಲೆ?'

'ಇನ್ನಷ್ಟು ಕಲಿಯಬೇಕಾದರೆ?'

'ಒಂದು ಮೂರು ತಿಂಗಳು ಅವಕಾಶ ಸಿಕ್ಕಿದರೆ ಸಾಕೇನೋ' ಎಂದೆ.

'ಅಂದಹಾಗೆ ನೀವು ಕೆಲಸವಾಗಲು ಯಾರಾದರೂ ಕಾಲು ಹಿಡಿಯುವಿರಾ?' ಎಂದು ಪ್ರಶ್ನೆ ಎಸೆದಾಗ ನಾನು ಸೆಟೆದು ನಿಂತು 'ಇಂಪಾಸಿಬಲ್' ಎಂದೆ.

'ಫೈನ್. ನಿಮಗೆ ನೀರಾವರಿ ಎಂದರೆ ತುಂಬಾ ಇಷ್ಟ ಅಲ್ವಾ?' ಎಂದಳು

'ನಿನಗೆ ಹೇಗೆ ಗೊತ್ತಾಯಿತು?'

'ಅದೇ ನೀವು ಮನೆ ಕಟ್ಟುವಾಗ ಮಾಡಿದ ಮೊದಲ ಕೆಲಸ ಎಂದರೆ ಬೋರ್‌ವೆಲ್ ಹಾಕಿಸಿದ್ದು. ನೋಡಿ ಅದು ನಿಮ್ಮ ದೂರಾಲೋಚನೆಯನ್ನು ತೋರಿಸುತ್ತದೆ' ಎಂದಳು.

ನಾನು ಬೀಗಿದೆ. ಹೆಂಡತಿ ಹೊಗಳಿದಾಗ ಬೀಗದಿರಲು ಸಾಧ್ಯವೆ?


ಆದರೆ ಈ ಪ್ರಶ್ನೆಗಳ ಉದ್ದೇಶ ನನಗೆ ಅರ್ಥವಾಗಲೇ ಇಲ್ಲ. ಹಸು ಮೇಯಿಸೋದು, ಸಗಣಿ ಬಾಚೋದು, ರಾಗಿ ಮುದ್ದೆ ತಿನ್ನೋದು, ಕನ್ನಡಾಭಿಮಾನ, ನೀರಾವರಿ ಮೇಲೆ ಮೋಹ, ಹಿಂದಿ ಕಲಿಕೆ.... ಏನಿದೆಲ್ಲ? ಒಂದಕ್ಕೊಂದು ಸಂಬಂಧವೇ ಇಲ್ಲವಲ್ಲ?

'ಏನೀ 'ಆಪ್‌ಕಿ ಅದಾಲತ್' ಮಾದರಿ ಪ್ರಶ್ನಾವಳಿ?' ಎಂದು ಅವಳನ್ನೇ ನೇರವಾಗಿ ಕೇಳಿದೆ.


'ಇಷ್ಟು ಅರ್ಹತೆಗಳಿದ್ದರೆ ಭಾರತದ ಪ್ರಧಾನಿ ಆಗಬಹುದು. ನಿಮಗೂ ಛಾನ್ಸ್ ಇದೇರೀ' ಎಂದು ಬೀಗತೊಡಗಿದಳು.

ಎಸ್.ಪಿ.ಜಿ. ರಕ್ಷಣೆಯ ಬಂಧನದಲ್ಲಿ ನನಗೆ ಆಗಲೇ ಉಸಿರು ಕಟ್ಟುಂತಹ ಅನುಭವ ಆಗತೊಡಗಿತು. ಅದೇ ಗುಂಗಿನಲ್ಲಿ ನನ್ನ ರಾಮಕೃಷ್ಣ ಹೆಗಡೆ ಯಾರಿರಬಹುದು ಎಂದು ಯೋಚಿಸತೊಡಗಿದೆ.

---



[illegible] ಬೆಲೆಯನ್ನು [illegible] —






Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS. 404. Sampige Road, Malleswaram, Bangalore-560 003. Editor : M. SHIVAKUMAR.